## ಅಧ್ಯಾಯ 21

# ಇಸಾಕ ಮತ್ತು ಇಸ್ಮಾಯೇಲ ನಡುವಿನ ಘರ್ಷಣೆ

21ನೇ ಅಧ್ಯಾಯದ ಮೊದಲನೆಯ ಭಾಗವು ವಾಗ್ದಾನದ ಪುತ್ರನ ಸುತ್ತ ಕೇಂದ್ರಿಕೃತವಾಗಿರುತ್ತದೆ. ಅಷ್ಟೊಂದು ದೀರ್ಘಕಾಲದ ವರೆಗೂ ಕಾದಿದ್ದ ಬಳಿ, ಇಸಾಕನ ಆಗಮನವಾದದ್ದು ಅಬ್ರಹಾಮ ಮತ್ತು ಸಾರಳ ಮನೆಯಲ್ಲಿ ಸಂತೋಷವನ್ನುಂಟು ಮಾಡಿತ್ತೆಂಬುದರಲ್ಲಿ ಸಂಶಯವೇ ಇಲ್ಲ. ಹೇಗೂ, ದೇವರ ವಾಗ್ದಾನವು ನೆರವೇರುವಂತೆ ಆಗಬೇಕೆಂದು ತಮಗಿದ್ದ ಕಳಕಳಿಯ ಕಾರಣದಿಂದಾಗಿ, ಅಬ್ರಹಾಮನು ಈಗಾಗಲೇ ಸಾರಳ ದಾಸಿಯಾದ ಹಾಗರಳಲ್ಲಿ ಇಸ್ಮಾಯೇಲನಿಗೆ ತಂದೆಯಾಗಿದ್ದನು. ಇದರ ಫಲಿತವಾಗಿ ಕುಟುಂಬ ಕಲಹವುಂಟಾಗಿತ್ತು. ಆದದರಿಂದ ಇಸಾಕನ ಜನನವು ಅತ್ಯಂಥ ದೊಡ್ಡ ಉತ್ಸಾಹವನ್ನು ಮಾತ್ರವೇ ಉಂಟು ಮಾಡಲಿಲ್ಲ, ಆದರೆ ಹೆಚ್ಚು ವ್ಯಾಜ್ಯವನ್ನು ಸಹ ಉಂಟು ಮಾಡಿ ಕೊನೆಗೆ ಹಾಗರಳು ಮತ್ತು ಇಸ್ಮಾಯೇಲರನ್ನು ಹೊರಕ್ಕೆ ಕಳುಹಿಸುವದರಲ್ಲಿ ಮುಕ್ತಾಯಗೊಂಡಿತ್ತು.

ಈ ಅಧ್ಯಾಯದ ಕಡೆಯ ಭಾಗವು ಅಬ್ರಹಾಮ ಮತ್ತು ಫಿಲಿಷ್ಟಿಯರ ಅರಸನಾದ ಅಬೀಮೆಲೆಕನ ಮೇಲೆ ಮುಖ್ಯ ಗಮನವನ್ನು ಹೊಂದಿರುವಂಥ ಒಂದು ಭಿನ್ನವಾದ ಕಥೆಯನ್ನು ಮುಂದಿಡುತ್ತದೆ. ಈ ಇಬ್ಬರು ವ್ಯಕ್ತಿಗಳು ಬೇರ್ಷೇಬದಲ್ಲಿ ಪರಸ್ಪರ ಹಾಗೂ ಅವರ ಸಂತತಿಯವರ ನಡುವೆ ಪ್ರಾಮಾಣಿಕತೆ ಮತ್ತು ದಯೆಯಿಂದ ನಡೆದುಕೊಳ್ಳುವದಾಗಿ ಒಂದು ಒಪ್ಪಂದವನ್ನು ಮಾಡಿಕೊಂಡರು.

### ಇಸಾಕನ ಜನನ (21:1-7)

**1ಯೆಹೋವನು ತಾನು ಹೇಳಿದ್ದಂತೆಯೇ ಸಾರಳ ಮೇಲೆ ದಯವಿಟ್ಟು ಆಕೆಗೆ ಕೊಟ್ಟ**
**ಮಾತನ್ನು ನೆರವೇರಿಸಿದನು. 2ಹೇಗಂದರೆ ಸಾರಳು ಬಸುರಾಗಿ ದೇವರು ಮೊದಲು ಸೂಚಿಸಿದ**
**ಕಾಲದಲ್ಲಿ ಅಬ್ರಹಾಮನಿಂದ ಅವನ ಮುಪ್ಪಿನಲ್ಲೇ ಮಗನನ್ನು ಹೆತ್ತಳು. 3ಅಬ್ರಹಾಮನು ಸಾರಳಲ್ಲಿ**
**ತನ್ನಿಂದ ಹುಟ್ಟಿದ ಮಗನಿಗೆ 4ಇಸಾಕನೆಂದು ಹೆಸರಿಟ್ಟು ಎಂಟನೆಯ ದಿನದಲ್ಲಿ ದೇವರ ಅಪ್ಪಣೆಯ**
**ಮೇರೆಗೆ ಸುನ್ನತಿ ಮಾಡಿದನು. 5ಇಸಾಕನು ಹುಟ್ಟಿದಾಗ ಅಬ್ರಹಾಮನು ನೂರು**
**ವರುಷದವನಾಗಿದ್ದನು. 6ಸಾರಳು - ದೇವರು ನನ್ನನ್ನು ನಗುವಂತೆ ಮಾಡಿದ್ದಾನೆ;**
**ಕೇಳುವವರೆಲ್ಲರೂ ನನ್ನೊಡನೆ ನಗುವರು. 7ಸಾರಳೂ ಮಕ್ಕಳಿಗೆ ಮೊಲೆ ಕುಡಿಸುವಳೆಂದು**
**ಯಾರಾದರೂ ಅಬ್ರಹಾಮನಿಗೆ ಹೇಳುತ್ತಿದ್ದರೋ? ಆದರೂ ಅವನ ಮುಪ್ಪಿನಲ್ಲೇ ಅವನಿಗೆ**
**ಮಗನನ್ನು ಹೆತ್ತಿದ್ದೇನಷ್ಟೆ ಎಂದು ಹೇಳಿಕೊಂಡಳು.**

**ವಚನ 1.** ಅಬ್ರಹಾಮ ಮತ್ತು ಸಾರಳರು ತಮ್ಮ ವಾಗ್ದಾನದ ಮಗನನ್ನು ಪಡೆದುಕೊಳ್ಳುವದಕ್ಕೆ ಸುಮಾರು ಕಾಲ ಶತಮಾನದಷ್ಟು ಸಮಯ ಕಾದುಕೊಂಡಿದ್ದ ಬಳಿಕ, **ಯೆಹೋವನು ತಾನು ಹೇಳಿದ್ದಂತೆಯೇ ಸಾರಳ ಮೇಲೆ ದಯವಿಟ್ಟನು**. "ದಯವಿಟ್ಟನು" ಎಂಬ ಮಾತು פָּקַד *(ಪಕ್ವಾದ)* ಎಂಬ ಇಬ್ರಿಯ ಪದದ ಅನುವಾದವಾಗಿದೆ, ಅದರರ್ಥವು "ಭೇಟಿ ಕೊಡು" ಎಂದಾಗಿದೆ. ಇದು ಪ್ರಕೃತಿಯಲ್ಲಿ ಮತ್ತು ಮಾನವ ವ್ಯವಹಾರಗಳಲ್ಲಿ ಮಧ್ಯಪ್ರವೇಶ ಮಾಡುವ ವಿಚಾರವನ್ನು ತಿಳಿಸುವದಕ್ಕೆ ಬೈಬಲಿನಲ್ಲಿ ಬಳಸುವ ಸಾಮಾನ್ಯ ರೂಪಕೋಕ್ತಿಯಾಗಿರುತ್ತದೆ. ಅದು ಕೆಲವು ಸಾರಿ, ಇಲ್ಲಿರುವ ಪ್ರಕಾರವೇ ಒಂದು ಕೃಪಾಭರಿತ ಹಾಗೂ ಪ್ರಯೋಜನಾರ್ಥವಾದ ಮಧ್ಯಪ್ರವೇಶಿಸುವಿಕೆ ಆಗಿರುತ್ತಿತ್ತು (ನೋಡಿರಿ 50:24, 25; ವಿಮೋಚನಕಾಂಡ 4:31; ರೂತಳು 1:6; ಕೀರ್ತನೆ 8:4); ಇನ್ನು ಕೆಲವು ಸಂದರ್ಭಗಳಲ್ಲಿ, ಇದು ದಶಾಜ್ಞೆಯಲ್ಲಿನ ಎಚ್ಚರಿಕೆಯ ಮಾತಿನಲ್ಲಿ ತಿಳಿಸಲ್ಪಟ್ಟಿರುವ ಪ್ರಕಾರ ಒಂದು ಶಿಕ್ಷೆಯ ರೂಪದಲ್ಲಿನ ನ್ಯಾಯತೀರ್ಪಿನಿಂದ ಕೂಡಿದ ಮಧ್ಯಪ್ರವೇಶಿಸುವಿಕೆ ಆಗಿರುತ್ತಿತ್ತು (ವಿಮೋಚನಕಾಂಡ 20:5; ಧರ್ಮೋಪದೇಶಕಾಂಡ 5:9). ಸಾರಳು ಒಬ್ಬ ಮಗನನ್ನು ಪಡೆಯುವಳೆಂದು ದೇವರು ಹೇಳಿದ್ದನು (17:19; 18:10), ಮತ್ತು ಯೆಹೋವನು **ಆಕೆಗೆ ಕೊಟ್ಟ ಮಾತನ್ನು ನೆರವೇರಿಸಿದನು**. ಈ ವಾಕ್ಯಭಾಗದಲ್ಲಿ ಮುಖ್ಯ ಒತ್ತು ದೇವರ ವಾಗ್ದಾನವು ಒಂದು ದೊಡ್ಡ ಅದ್ಭುತವಾಗಿ ನೆರವೇರುವದರ ಮೇಲೆ ಇರುತ್ತದೆ.

**ವಚನ 2.** ಯೆಹೋವನು ಸ್ತ್ರೀಯರನ್ನು - ಹನ್ನಳು (1 ಸಮುವೇಲ 2:21), ಎಲಿಸಬೇತಳು (ಲೂಕ 1:68), ಮತ್ತು ಸಾರಳು ಸೇರಿದಂತೆ - ಭೇಟಿ ಮಾಡುವ ಮಾತನ್ನು ಬೈಬಲ್ ಬಳಸುತ್ತದೆ, ಅವರು ಅದರ ಫಲಿತವಾಗಿ ಗರ್ಭಿಣಿಯರಾಗಿ ಮಗುವಿಗೆ ಜನ್ಮ ಕೊಡುವವರಾದರು. ಹೇಗೂ, ಅಂಥ ಭೇಟಿಯ ವಿಚಾರವು, ಅನ್ಯಧರ್ಮಿಯರ ದೇವರುಗಳ ವಿಷಯದಲ್ಲಿದ್ದಂತೆ ಅಂಥ ಮಕ್ಕಳಿಗೆ ದೈವಿಕ ವಂಶತೆಯು ಇರುತ್ತದೆ ಎಂದಾಗಿರಲಿಲ್ಲ, ಅವರ ದೇವರುಗಳು ಲೈಂಗಿಕವಾಗಿ ಸ್ತ್ರೀಯರಿಗೆ ಭೇಟಿ ಕೊಡುತ್ತಿದ್ದವೆಂದು ಹೇಳಲಾಗಿರುತ್ತದೆ. ಬದಲಾಗಿ, ಇದು ರೂಪಕೋಕ್ತಿಯಾಗಿದ್ದು, ದೇವರು ಅಂಥ ಮಹಿಳೆಯರನ್ನು ಬಂಜೆತನದ ಸಮಸ್ಯೆಯಿಂದ ಬಿಡುಗಡೆಗೊಳಿಸಿ ಗರ್ಭಧರಿಸುವಂತೆ ಶಕ್ತಗೊಳಿಸಿದನು ಎಂಬ ಅರ್ಥವನ್ನು ಹೊಂದಿರುತ್ತದೆ. ಈ ಭಾವನೆಯು 21:2ರಲ್ಲಿ ಒತ್ತಿ ಹೇಳಲ್ಪಟ್ಟಿದೆ, **ಹೇಗಂದರೆ ಸಾರಳು ಬಸುರಾಗಿ ಅಬ್ರಹಾಮನಿಂದ ಅವನ ಮುಪ್ಪಿನಲ್ಲೇ ಮಗನನ್ನು ಹೆತ್ತಳು** ಎಂದು ಅದು ಹೇಳುತ್ತದೆ. ಈ ಪ್ರಕರಣದಲ್ಲಿ, ದೇವರು ಭೇಟಿ ಕೊಟ್ಟಿದ್ದು ಗಂಡ ಮತ್ತು ಹೆಂಡತಿಯರಿಬ್ಬರಿಗೂ ಹೊಸ ಚೈತನ್ಯವನ್ನು ನೀಡಿತ್ತು, ಇವರು ವಯಸ್ಸಾಗಿದ್ದ ಕಾರಣದಿಂದ ಸಂತಾನೋತ್ಪತ್ತಿಯನ್ನು ಮಾಡುವ ವಯಸ್ಸನ್ನು ಮೀರಿ ಬಹಳ ಕಾಲವಾಗಿತ್ತು (ರೋಮಾ 4:19). ಈ ಕಾರಣಕ್ಕಾಗಿ, ಸಾರಳ ಗರ್ಭದ ಫಲವು ವಯಸ್ಸಾಗಿದ್ದ ಮೂಲಪಿತೃವಿಗೆ (ಅವನಿಂದ) ಹುಟ್ಟಿದ ಒಬ್ಬ "ಮಗ" ಆಗಿತ್ತು. ಅಲ್ಲದೆ ವಾಗ್ದಾನ ಮಾಡಲ್ಪಟ್ಟಿದ್ದ ಮಗುವಿನ ಜನನವು **ದೇವರು ಮೊದಲು ಸೂಚಿಸಿದ ಕಾಲದಲ್ಲಿ** ಉಂಟಾಗಿತ್ತೆಂಬುದು ಸಹ ಮಹತ್ವಪೂರ್ಣವಾಗಿರುತ್ತದೆ (ನೋಡಿರಿ 17:21; 18:14).

**ವಚನ 3.** ಈ ಹಿಂದೆ **ಅಬ್ರಹಾಮನು** ಇಸ್ಮಾಯೇಲನಿಗೆ ಹೆಸರನ್ನಿಟ್ಟಿದ್ದ ಹಾಗೆಯೇ (16:15), ಹಿಂದಿನ ವರ್ಷದಲ್ಲಿ ಯೆಹೋವನ ಆಜ್ಞೆಗೆ ಪ್ರತ್ಯುತ್ತರವಾಗಿ ಈಗ ಆತನು **ಸಾರಳಲ್ಲಿ ತನ್ನಿಂದ ಹುಟ್ಟಿದ ಮಗನಿಗೆ** ಹೆಸರನ್ನಿಟ್ಟನು. ಈ ಹುಡುಗನಿಗೆ ಆತನು **ಇಸಾಕನೆಂದು** ("ಆತನು ನಕ್ಕನು") **ಹೆಸರಿಟ್ಟನು**, ಅದು ಮಗುವು ಗರ್ಭಧರಿಸಲ್ಪಡುವದಕ್ಕೆ ಮುಂಚೆಯೇ ದೇವರು ಆರಿಸಿಕೊಂಡಿದ್ದ ಹೆಸರಾಗಿತ್ತು (17:19). ಈ ಹೆಸರು ಸೂಕ್ತವಾಗಿತ್ತು ಯಾಕೆಂದರೆ ಅಬ್ರಹಾಮ ಮತ್ತು ಸಾರಳು ಇಬ್ಬರೂ ತಮ್ಮ ಆ ವಯಸ್ಸಿನಲ್ಲಿ ಒಬ್ಬ ಮಗನು ಹುಟ್ಟುವನೆಂಬ ವಾಗ್ದಾನವನ್ನು ನಂಬದವರಾಗಿ

ನಕ್ಕಿದ್ದರು (17:17; 18:12).

**ವಚನ 4.** ಇಸಾಕನು ಹುಟ್ಟಿದ ಸುದ್ದಿಯನ್ನು ಕೇಳಿ ಮೂಲಪಿತೃವು ಅತ್ಯಂಥ ಸಂತೋಷದಿಂದ ಯಾವದೇ ಭಾವನಾತ್ಮಕತೆಯನ್ನು ವ್ಯಕ್ತಪಡಿಸಿದನೆಂಬುದಾಗಿ ವಾಕ್ಯವು ದಾಖಲಿಸುವದಿಲ್ಲ. ಆತನು ಅಂತಹ ಪ್ರತಿಕ್ರಿಯೆಯನ್ನು ತೋರಿಸಿರುವ ಸಾಧ್ಯತೆಯಿರುತ್ತದೆ, ಯಾಕೆಂದರೆ ಇದು ಬಹಳ ಕಾಲದಿಂದ ಆತನಗಿದ್ದಂಥ, ಅವಾಸ್ತವಿಕ ಎಂಬಂತೆ ಕಾಣಿಸಿದ ಕನಸಿನ ನೆರವೇರಿಕೆಯಾಗಿತ್ತಷ್ಟೆ. ನಮಗೆ ಅದು ಗೊತ್ತಿರುವದಿಲ್ಲ, ದೇವರು ಮೊದಲೇ ನೇಮಿಸಿದ್ದ ಕಾಲದಲ್ಲಿ ಒಬ್ಬ ಮಗನನ್ನು ಕೊಡುವೆನೆಂಬ ತನ್ನ ವಾಗ್ದಾನವನ್ನು ನೆರವೇರಿಸುವದರಲ್ಲಿ ನಂಬಿಗಸ್ತನಾಗಿದ್ದ ಪ್ರಕಾರವೇ, ಅಬ್ರಹಾಮನು ಸಹ **ಎಂಟನೆಯ ದಿನದಲ್ಲಿ ದೇವರ ಅಪ್ಪಣೆಯ ಮೇರೆಗೆ ಸುನ್ನತಿ ಮಾಡು**ವದನ್ನು ಜ್ಞಾಪಕದಲ್ಲಿಟ್ಟುಕೊಂಡು ನಡಿಸಿದನು. ಈ ವಿಷಯದಲ್ಲಿ, ಮೂಲಪಿತೃವು ಮೋಶೆಯಂತೆ ಇರಲಿಲ್ಲ, ಆತನು ತನ್ನ ಮಗನು ಬಹಳ ಬೆಳೆಯುವ ವರೆಗೂ ಆತನಿಗೆ ಸುನ್ನತಿ ಮಾಡಿಸುವದನ್ನು ನಿರ್ಲಕ್ಷ್ಯ ಮಾಡಿದ್ದನು (ವಿಮೋಚನಕಾಂಡ 2:21, 22; 4:24-26).

**ವಚನ 5.** ಒಂದು ವರ್ಷದ ಮುಂಚೆ **ಅಬ್ರಹಾಮನು** ಕೇಳಿದ್ದ ಪ್ರಶ್ನೆಗೆ (17:17) - "ನೂರು ವರುಷದವನಿಗೆ ಮಗ ಹುಟ್ಟುವದುಂಟೇ?" - ಉತ್ತರವು ಸಿಕ್ಕಿತ್ತು. ಸ್ವಾಭಾವಿಕ ದೃಷ್ಟಿಯಿಂದ ನೋಡುವದಾದರೆ ಅದು ಅಸಾಧ್ಯವಾಗಿದ್ದಂಥ ಸಂಗತಿಯು ದೇವರ ಶಕ್ತಿಯ ಮೂಲಕವಾಗಿ ಸಂಭವಿಸಿತ್ತು. **ಇಸಾಕನು ಹುಟ್ಟಿದಾಗ** ಮೂಲಪಿತೃವು **ನೂರು ವರುಷದವನಾಗಿದ್ದನು**.

**ವಚನ 6.** ಮಗುವು ಹುಟ್ಟಿದಾಗ, **ಸಾರಳು** ಸಂತೋಷದಿಂದ ಯೆಹೋವನು ತನಗೆ ಮಾಡಿದ ಕಾರ್ಯಕ್ಕಾಗಿ ಪದ್ಯವನ್ನು ಹಾಡುತ್ತಾಳೆ. ಆಕೆಯು ಸಾರಿದ್ದೇನೆಂದರೆ, **ದೇವರು ನನ್ನನ್ನು ನಗುವಂತೆ ಮಾಡಿದ್ದಾನೆ; ಕೇಳುವವರೆಲ್ಲರೂ ನನ್ನೊಡನೆ ನಗುವರು.** ಇಲ್ಲಿ ಆಕೆಯು "ಇಸಾಕ" ಎಂಬ ಹೆಸರಿನ ಮೇಲೆ ಶಬ್ದಾಡಂಬರವನ್ನು ಬಳಸಿದಳು. ಈ ಮುಂಚೆ, ಈ ಹೆಸರು ಅಪನಂಬಿಕೆಯಿಂದ ನಕ್ಕಿದ್ದರೊಂದಿಗೆ ಸಂಬಂಧಗೊಳಿಸಲ್ಪಟ್ಟಿತ್ತು (17:17-19; 18:12-15). ಈಗ, ಉತ್ಸಾಹಪೂರ್ಣಳಾಗಿ ನಗುತ್ತಿದ್ದಾಳೆ; ಮತ್ತು ಒಬ್ಬ ವೃದ್ಧ ಸ್ತ್ರೀಯು ಮಗುವಿಗೆ ಜನ್ಮ ನೀಡಿದಳೆಂಬ ಕಥೆಯನ್ನು ಕೇಳುವವರೆಲ್ಲರೂ ತನ್ನೊಂದಿಗೆ - ಕೆಲವರು ಈ ಹೇಳಿಕೆಯನ್ನು ಅರ್ಥನಿರೂಪಣೆ ಮಾಡಿದ ಪ್ರಕಾರ, "ಆಕೆಯನ್ನು ನೋಡಿ" ಅಲ್ಲ - ನಗುವರು ಎಂದು ನಂಬಿದಳು. ಅಪಹಾಸ್ಯದಿಂದ ನಗುವುದು ಎಂಬ ಯೋಚನೆಗೆ ಈ ವಾಕ್ಯದಲ್ಲಿ ಸ್ವಲ್ಪವೂ ಸ್ಥಳವಕಾಶವೇ ಇರುವದಿಲ್ಲ. ಸಾರಳು ದೇವರ ಮಹತ್ಕಾರ್ಯಗಳನ್ನು ನೋಡಿ ವಿಸ್ಮಿತಳಾಗಿ ಸಂಭ್ರಮಿಸುತ್ತಿದ್ದಾಳೆಂಬುದು ಸ್ಪಷ್ಟವಾಗುತ್ತದೆ, ಆತನು ಇಬ್ಬರು ವೃದ್ಧರನ್ನು ತಂದೆತಾಯಿಗಳಾಗುವಂತೆ ಮಾಡಿದ್ದನಷ್ಟೆ.[1]

**ವಚನ 7.** ಅದರ ಜೊತೆಗೆ, ಇಸಾಕನ ಜನನದಿಂದ ತನಗಾಗಿರುವ ಮಹಾ ಸಂತೋಷದ ಕುರಿತು ಸಾರಳು ಸಾರುತ್ತಲೇ ಇದ್ದವು. ತಾನು ಗರ್ಭಿಣಿಯಾಗಲು ಅಶಕ್ತಳಾಗಿದ್ದಳಲ್ಲಾ ಎಂಬ ಶೂನ್ಯತೆ ಹಾಗೂ ಹತಾಶೆಯ ಬದಲಾಗಿ, ಆಕೆಯು ತಾನು ತಾಯಿಯಾಗಿರುವದರ ಸಂತೋಷವನ್ನು ಈ ಪ್ರಶ್ನೆಯ ಮೂಲಕ ಘೋಷಿಸಿದಳು, **ಸಾರಳೂ ಮಕ್ಕಳಿಗೆ ಮೊಲೆ ಕುಡಿಸುವಳೆಂದು ಯಾರಾದರೂ ಅಬ್ರಹಾಮನಿಗೆ ಹೇಳುತ್ತಿದ್ದರೋ?** ಖಂಡಿತವಾಗಿಯೂ, ಈ ಪ್ರಶ್ನೆಯು ಒಂದು ನಕಾರಾತ್ಮಕ ಉತ್ತರವನ್ನು ಎದುರು ನೋಡುತ್ತದೆ: "ಇಲ್ಲ, ಯಾರೊಬ್ಬರೂ ಸಹ ಸಾಧಾರಣವಾದ ಪರಿಸ್ಥಿತಿಗಳಲ್ಲಿ ಸಾರಳು ಈಗಷ್ಟೆ ಮಗುವಿಗೆ ಜನ್ಮ ನೀಡಿ ಮೊಲೆ ಕುಡಿಸುತ್ತಿದ್ದಾಳೆಂಬ ಸುದ್ದಿಯನ್ನು ಅಬ್ರಹಾಮನಿಗೆ ತಿಳಿಸಲು ಆಗುತ್ತಿರಲಿಲ್ಲ." ವಾಸ್ತವಿಕದಲ್ಲಿ, ಅವರಿಗಿರುವ ವಯಸ್ಸಿನಲ್ಲಿ ಮಗುವೊಂದನ್ನು ಪಡೆಯುವರೆಂಬ ಯೋಚನೆ ಸಹ ಎಷ್ಟೊಂದು

ಸಂಶಯಾತ್ಮಕವಾಗಿತ್ತೆಂದರೆ ಮೂಲಪಿತೃ ಮತ್ತು ಆತನ ಹೆಂಡತಿ ಇಬ್ಬರೂ ಅಂತಹ ಸಾಧ್ಯತೆಯ ಕುರಿತು ದೇವರಲ್ಲಿ ತಮ್ಮ ಅಪನಂಬಿಕೆಯನ್ನು ವ್ಯಕ್ತಪಡಿಸಿದ್ದರಷ್ಟೆ. ಹಾಗಿದ್ದರೂ, "ಅಸಾಧ್ಯವಾದ ಸಾಧ್ಯತೆಯು" ಸಂಭವಿಸಿತ್ತು, ಮತ್ತು ಸಾರಳು ಹೀಗೆ ಉದ್ಗರಿಸಿದಳು, **ಆದರೂ ಅವನ ಮುಪ್ಪಿನಲ್ಲೇ ಅವನಿಗೆ ಮಗನನ್ನು ಹೆತ್ತಿದ್ದೇನಷ್ಟೆ.**

## ಸಾರಳ ಹೊಟ್ಟೇಕಿಚ್ಚು (21:8-14)

**[8]ಆ ಕೂಸು ಬೆಳೆದು ಮೊಲೆಬಿಟ್ಟಿತು. ಇಸಾಕನು ಮೊಲೆಬಿಟ್ಟ ದಿನದಲ್ಲಿ ಅಬ್ರಹಾಮನು ದೊಡ್ಡ ಔತಣವನ್ನು ಮಾಡಿಸಿದನು. [9]ಆದರೆ ಐಗುಪ್ತ್ಯಳಾದ ಹಾಗರಳಲ್ಲಿ ಅಬ್ರಹಾಮನಿಗೆ ಹುಟ್ಟಿದ ಮಗನು ನಗುವದನ್ನು ಸಾರಳು ಕಂಡು ಅಬ್ರಹಾಮನಿಗೆ - [10]ಈ ದಾಸಿಯನ್ನೂ ಅವಳ ಮಗನನ್ನೂ ಹೊರಗೆ ಹಾಕು; ಈ ದಾಸಿಯ ಮಗನು ನನ್ನ ಮಗನಾದ ಇಸಾಕನೊಂದಿಗೆ ಬಾಧ್ಯನಾಗಬಾರದು ಎಂದು ಹೇಳಿದಳು. [11]ಮಗನ ದೆಸೆಯಿಂದ ಈ ಮಾತು ಅಬ್ರಹಾಮನಿಗೆ ಬಹುದುಃಖವನ್ನು ಹುಟ್ಟಿಸಿತು. [12]ಆದರೆ ದೇವರು ಅವನಿಗೆ - ಮಗನ ಮತ್ತು ದಾಸಿಯ ದೆಸೆಯಿಂದ ನಿನಗೆ ಕರಕರೆಯಾಗಬಾರದು; ಸಾರಳು ಹೇಳಿದಂತೆಯೇ ಮಾಡು; ಇಸಾಕನಿಂದ ಹುಟ್ಟುವವರೇ ನಿನ್ನ ಸಂತತಿ ಅನ್ನಿಸಿಕೊಳ್ಳುವರು; [13]ಈ ದಾಸಿಯ ಮಗನು ನಿನ್ನಿಂದ ಹುಟ್ಟಿದವನಾದ್ದರಿಂದ ಅವನಿಂದಲೂ ಜನಾಂಗವಾಗುವಂತೆ ಮಾಡುವೆನು ಎಂದು ಹೇಳಿದನು. [14]ಮಾರಣೇ ದಿನ ಬೆಳಿಗ್ಗೆ ಅಬ್ರಹಾಮನು ಎದ್ದು ಹಾಗರಳಿಗೆ ಬುತ್ತಿಯನ್ನೂ ಒಂದು ತಿತ್ತಿ ತಣ್ಣೀರನ್ನೂ ಕೊಟ್ಟು ಅವಳ ಹೆಗಲಿನ ಮೇಲೆ ಇಟ್ಟು ಮಗುವನ್ನು ಒಪ್ಪಿಸಿ ಕಳುಹಿಸಿಬಿಟ್ಟನು. ಅವಳು ಹೊರಟು ಬೇರ್ಷೆಬದ ಕಾಡಿನಲ್ಲಿ ಅಲೆಯುತ್ತಿದ್ದಳು.**

ಇಸಾಕನ ಜನನವು ಅಬ್ರಹಾಮ ಮತ್ತು ಸಾರಳಿಗೆ ಬಹಳವಾದ ಸಂತೋಷವನ್ನುಂಟು ಮಾಡಿತ್ತು. ಹೇಗೂ, ಮನೆಯಲ್ಲಿದ್ದವರೆಲ್ಲರೂ ಆತನ ಆಗಮನವನ್ನು ಸ್ವಾಗತಿಸಲಿಲ್ಲ.

**ವಚನ 8.** ವೃದ್ಧರಾದ ಮೂಲಪಿತೃ ಮತ್ತು ಆತನ ಹೆಂಡತಿ ತಮ್ಮ ವಾಗ್ದಾನದ **ಕೂಸು ಮೊಲೆಬಿಟ್ಟು** ಬೆಳೆಯುವದನ್ನು ಕಂಡರು. ಆ **ದಿನದಲ್ಲಿ ಅಬ್ರಹಾಮನು ದೊಡ್ಡ ಔತಣವನ್ನು ಮಾಡಿಸಿದನು**. ಪ್ರಾಚೀನ ಮಧ್ಯಪ್ರಾಚ್ಯದಲ್ಲಿ ಮಗುವು ಮೊಲೆ ಬಿಡುವಂಥದ್ದು ಸುಮಾರು ಮೂರು ವಯಸ್ಸಾಗಿರುವ ವೇಳೆ ಸಂಭವಿಸುತ್ತಿತ್ತು, ಮತ್ತು ಅದಾದ ಬಳಿಕ ಕೊಂಡಾಟವನ್ನು ನಡಿಸಲಾಗುತ್ತಿತ್ತು.[2]

**ವಚನ 9.** ಹೇಗೂ, ಈ ಸಂದರ್ಭದಲ್ಲಿ, ಅವರ ಕೊಂಡಾಟವು ಬಹಳ ಹೊತ್ತು ಉಳಿಯಲಿಲ್ಲ; **ಸಾರಳಿಗೆ** ಅದು ಕೆಟ್ಟು ಹೋಗಿತ್ತು, ಯಾಕೆಂದರೆ **ಹಾಗರಳು** ಮತ್ತು ಆಕೆಯ ನಡುವಿನ ಹಳೆಯ ವೈರತ್ವವು ಪುನಃ ತಲೆಯನ್ನು ಎತ್ತಿತ್ತು. ಆ ಹಬ್ಬದ ವಾತಾವರಣವು ಹೇಗೆ ಕೆಡಿಸಲ್ಪಟ್ಟಿತ್ತೆಂದರೆ, ಅಷ್ಟೊತ್ತಿಗೆ ಹದಿನಾರು ಅಥವಾ ಹದಿನೇಳು ವರ್ಷದ ಯುವಕನಾಗಿದ್ದ[3] ಇಸ್ಮಾಯೇಲನು ಇನ್ನೂ ಒಬ್ಬ ಚಿಕ್ಕ ಹುಡುಗನಾಗಿದ್ದ ಇಸಾಕನ "ಸಂಗಡ ಆಟವಾಡಿದ" (NRSV) ಅಥವಾ ಅವನನ್ನು ನೋಡಿ "ನಗುತ್ತಲಿದ್ದ" (NEB) ರೀತಿಯೇ ಕಾರಣವಾಗಿತ್ತು. NASBಯು ಅಲ್ಲಿ ಇನ್ನು ಬಲವಾದದ್ದೇನೋ ನಡೆದಿದೆ ಎಂಬ ಅಭಿಪ್ರಾಯವನ್ನು ಸೂಚಿಸುತ್ತಾ, ಸಾರಳು ತನ್ನ ಮಗುವನ್ನು ಇಸ್ಮಾಯೇಲನು **ಹಾಸ್ಯಮಾಡುವದನ್ನು** (צָחַק, *ತ್ಸಚ್ಹಾಕ್*) ಕಂಡಳು ಎಂದು ಹೇಳುತ್ತದೆ. *ತ್ಸಚ್ಹಾಕ್* ಎಂಬ ಪದವು, ಸನ್ನಿವೇಶಕ್ಕನುಗುಣವಾಗಿ ಹಲವಾರು ಸಂಭಾವ್ಯ ಅರ್ಥಗಳನ್ನು ಹೊಂದಿದೆ. ಹೇಗೂ, ಇಲ್ಲಿ "ಹಾಸ್ಯಮಾಡಿದನು" ಎಂಬುದು ಸಹ ಅಷ್ಟಾಗಿ ಬಲವಾದದ್ದಾಗಿರುವದಿಲ್ಲ, ಯಾಕೆಂದರೆ ಇಸ್ಮಾಯೇಲನು ಇಸಾಕನನ್ನು

"ಹಿಂಸೆಪಡಿಸಿದನು" ಎಂಬರ್ಥದಲ್ಲಿ ಪೌಲನು ಈ ವಾಕ್ಯಭಾಗವನ್ನು ಅರ್ಥಮಾಡಿಕೊಂಡನು (ಗಲಾತ್ಯ 4:29).[4] ಹಾಗರಳ ಮಗನು ಈ ಚಿಕ್ಕ ಬಾಲಕನಿಗೆ ನಿಖರವಾಗಿ ಏನು ಮಾಡಿದನೆಂಬುದು ನಮಗೆ ತಿಳಿಯದು; ಆದರೆ ಸಾರಳು ಇಸ್ಮಾಯೇಲನನ್ನು ತನ್ನ ಮಗನಿಗೆ ಒಂದು ಗಂಡಾಂತರವೆಂಬಂತೆ ಕಂಡಳು. ಆತನು ಚಿಕ್ಕ ಬಾಲಕನನ್ನು ಕೇವಲ ಅಪಹಾಸ್ಯ ಮಾಡಿದನು, ಆತನು ಅಬ್ರಹಾಮನ ನಿಜವಾದ ಬಾಧ್ಯಸ್ಥನೆಂಬ ಸ್ಥಾನವನ್ನು ಎಂದಿಗೂ ಗಳಿಸಿಕೊಳ್ಳಲಾರನು ಎಂದು ಹೇಳುತ್ತಾ ಅವನನ್ನು ಮಾನಸಿಕವಾಗಿ ವೇದನೆ ಪಡಿಸಿದನು ಎಂದು ಕೆಲವರು ವಾದಿಸುತ್ತಾರೆ. ಇನ್ನೊಂದೆಡೆಯಲ್ಲಿ, ಇಸಾಕನ ಸಂಗಡದ ಒರಟಾದ ಆಟದ ("ಹಾನಿಕರವಾದ ವರ್ತನೆ"[5]) ಮಧ್ಯದಲ್ಲಿ ಈ ಮಾತುಗಳು ಹೆಚ್ಚು ಭಯಸೂಚಕವಾಗಿರುವ ಸಾಧ್ಯತೆಯು ಅಧಿಕವಾಗಿದೆ.

**ವಚನ 10.** ಸಾರಳು ಏನೇ ಕಂಡಿದ್ದರೂ ಸರಿಯೇ ಅದು ತನ್ನ ಮಗನಿಗೆ ಶಾರೀರಿಕವಾಗಿ ಹಾನಿಯಾಗುವ ಸಾಧ್ಯತೆಯಿದೆ ಎಂಬ ಭಯವನ್ನು ಆಕೆಯಲ್ಲಿ ಹುಟ್ಟಿಸಿರಬಹುದು, ಅಥವಾ ಇಸ್ಮಾಯೇಲನ ಕೃತ್ಯಗಳಲ್ಲಿ ಮುಂದೆ ಇಸಾಕನ ಪ್ರಾಣಕ್ಕೆ ಕುತ್ತು ಬರುವ ಸಾಧ್ಯತೆಯಿದೆ ಎಂಬುದಾಗಿ ಆಕೆಯು ಕಂಡಿರಬಹುದಾಗಿದೆ. ಆದದರಿಂದ, ಆಕೆಯು ತನ್ನ ಗಂಡನಿಗೆ ಹೀಗೆ ಬೇಡಿಕೊಂಡಳು, **ಈ ದಾಸಿಯನ್ನೂ ಅವಳ ಮಗನನ್ನೂ ಹೊರಗೆ ಹಾಕು; ಈ ದಾಸಿಯ ಮಗನು ನನ್ನ ಮಗನಾದ ಇಸಾಕನೊಂದಿಗೆ ಬಾಧ್ಯನಾಗಬಾರದು.**

ಸಾರಳು ಹಾಗರಳನ್ನು ಮತ್ತು ಇಸ್ಮಾಯೇಲನನ್ನು "ಹೊರಗೆ ಹಾಕು" ಎಂದು ಅಬ್ರಹಾಮನನ್ನು ಬೇಡಿಕೊಂಡ ವೇಳೆ, ಆಕೆಯು גָּרַשׁ *(ಗರಾಶ್)* ಎಂಬ ಪದವನ್ನು ಬಳಸಿದಳು. ಇದು 3:24ರಲ್ಲಿರುವಂತಹ ಅದೇ ಪದವಾಗಿರುತ್ತದೆ, ಆಗ ದೇವರು "[ಆದಾಮನನ್ನು] ಏದೆನ್ ತೋಟದಿಂದ ಹೊರಡಿಸಿಬಿಟ್ಟನು." ಇದು ಪುನಃ 4:14ರಲ್ಲಿ ಕಾಯಿನನಿಗೆ ಸಂಬಂಧ ಪಟ್ಟಂತೆ ಸಿಕ್ಕುತ್ತದೆ, ಅವನು "ಸ್ವದೇಶದಿಂದ ಹೊರಡಿ"ಸಲ್ಪಟ್ಟನು. 21:10ರಲ್ಲಿ, ಅದು ವಿಚ್ಛೇದನ ಎಂಬ ಸೂಚ್ಯಾರ್ಥ ನೀಡುತ್ತದೆ, ಆದಾಗ್ಯೂ ಇದು ಮೋಶೆಯ ಧರ್ಮಶಾಸ್ತ್ರದಲ್ಲಿ ಸೇರ್ಪಡೆಗೊಳ್ಳುವ ತನಕ ಮದುವೆಯನ್ನು ರದ್ದುಗೊಳಿಸುವ ತಾಂತ್ರಿಕ ಪದವಾಗಿ ಕಾಣಿಸಲಿಲ್ಲ (ಯಾಜಕಕಾಂಡ 21:7, 14; 22:13; ಅರಣ್ಯಕಾಂಡ 30:9; ನೋಡಿರಿ ಯೆಹೆಜ್ಕೇಲ 44:22).[6]

**ವಚನ 11.** ಅಬ್ರಹಾಮನು ಈಗ ಬಹಪತ್ನಿಯುಳ್ಳವರು ಸಾಮಾನ್ಯವಾಗಿ ಎದುರಿಸುವಂಥ ಒಂದು ಸಂದಿಗ್ಧ ಪರಿಸ್ಥಿತಿಗೆ ಸಿಕ್ಕಿಕೊಂಡಿದ್ದನು: ಆತನು ಒಂದು ಕುಟುಂಬವನ್ನು ಮೆಚ್ಚಿಸುವದಕ್ಕಾಗಿ ಇನ್ನೊಂದು ಕುಟುಂಬದ ವಿರುದ್ಧವಾಗಿ ತೀರ್ಮಾನ ತೆಗೆದುಕೊಳ್ಳಬೇಕಾಗಿತ್ತು. ಇದಾದ ಬಳಿಕ ನಡೆದ ಆಂತರೀಕ ಹೋರಾಟವನ್ನು ಕಥಾನಿರೂಪಕನು **ಮಗನಾದ** ಇಸ್ಮಾಯೇಲನ **ದೆಸೆಯಿಂದ ಈ ಮಾತು ಅಬ್ರಹಾಮನಿಗೆ ಬಹುದುಃಖವನ್ನು ಹುಟ್ಟಿಸಿತು** ಎಂಬ ಮಾತುಗಳಲ್ಲಿ ಚಿತ್ರಿಸುತ್ತಾನೆ. ಈ ವೃದ್ಧನು ತನ್ನ ಹಿರಿಯ ಮಗನ ಮೇಲೆ ಬಹಳವಾದ ಪ್ರೀತಿಯನ್ನಿಟ್ಟಿದ್ದನು, ಮತ್ತು ಸಾರಳ ಬೇಡಿಕೆಯಿಂದಾಗಿ ಆತ್ಮದಲ್ಲಿ ವ್ಯಥೆಗೊಂಡಿದ್ದನು ಮತ್ತು ಕಡುಸಂಕಟವನ್ನು ಅನುಭವಿಸಿದನು. ಒಡಂಬಡಿಕೆಯ ಆಶೀರ್ವಾದವನ್ನು ಪಡೆಯಲಿದ್ದ ವಾಗ್ದಾನದ ಮಗನು ಇಸಾಕನೇ ಎಂಬುದಾಗಿ ದೇವರು ಈಗಾಗಲೇ ಗುರುತಿಸಿದ್ದನಾದ್ದರಿಂದ (17:17-20; 18:9-15), ಅಬ್ರಹಾಮನು ಬಹುಶಃ ಈ ಇಬ್ಬರು ಮಹಿಳೆಯರು ಏಕೆ ಸಮಾಧಾನದಲ್ಲಿ ಜೀವಿಸಲಾರರು ಎಂಬುದಾಗಿ ಚಕಿತಗೊಂಡಿರಬಹುದು. ಹೇಗೂ, ಆತನ ಇಬ್ಬರು ಹೆಂಡತಿಯರ ನಡುವಿನ ಕಿರಿಕಿರಿಯುಂಟು ಮಾಡುವ ಹಗೆತನವು ನಿಜಕ್ಕೂ ಗುಣವಾಗಲೇ ಇಲ್ಲ; ಮತ್ತು ಈಗ ಸಾರಳು ಇಸ್ಮಾಯೇಲನ ಮಾತುಗಳನ್ನು ಮತ್ತು ನುಡಿಗಳನ್ನು ಇಸಾಕನ ಕುರಿತಾಗಿರುವ ಅಪಾಯಕಾರಿ

ಹೊಟ್ಟೇಕಿಚ್ಚೆಂದು ಗ್ರಹಿಸಿಕೊಂಡಳಾದ್ದರಿಂದ, ಮೂಲಪಿತೃವಿನ ಮನೆಯಲ್ಲಿದ್ದ ಸಮಸ್ಯೆಯು ಈಗ ಪರಿಹಾರವೇ ಇಲ್ಲದ್ದಾಗಿ ಮಾರ್ಪಟ್ಟಿತ್ತು.

**ವಚನ 12. ದೇವರು** ಅಬ್ರಹಾಮನಿಗೆ ಬುದ್ಧಿವಾದ ಹೇಳಿದನು: **ಮಗನ ಮತ್ತು ದಾಸಿಯ ದೆಸೆಯಿಂದ ನಿನಗೆ ಕರಕರೆಯಾಗಬಾರದು.** "ಮಗ" ಎಂಬುದನ್ನು ಅನುವಾದಿಸಿರುವ ಇಬ್ರಿಯ ಪದದ (נַעַר, *ನಾರ)* ಅರ್ಥವು ಒಬ್ಬ ಕೂಸಿನಿಂದ ಹಿಡಿದು ಬೆಳೆದಿರುವ ಪುರುಷನ ವರೆಗಿನ ಯಾವದೇ ಗಂಡು ಮಗುವನ್ನು ಸೂಚಿಸಬಹುದಾಗಿದೆ. ಉದಾಹರಣೆಗೆ, ಹನ್ನಳು ಸಮುವೇಲನಿಗೆ ಮೊಲೆಬಿಡಿಸಿದ ವೇಳೆ ಆತನನ್ನು ಸೂಚಿಸುವದಕ್ಕೆ *ನಾರ* ಎಂಬ ಪದವು ಬಳಸಲ್ಪಟ್ಟಿದೆ (1 ಸಮುವೇಲ 1:24), ಯೋಸೇಫನಿಗೆ ಹದಿನೇಳೂ ವಯಸ್ಸಾದಾಗ (37:2), ಮತ್ತು ಪುನಃ ಯೋಸೇಫನು ಮೂವತ್ತು ವರ್ಷದವನಾಗಿದ್ದ ವೇಳೆ ಆತನನ್ನು ಸೂಚಿಸಲು ಈ ಪದವು ಬಳಸಲ್ಪಟ್ಟಿದೆ (41:12, 46). ಹಾಗಾದರೆ, ದೇವರು ಇಸ್ಮಾಯೇಲನನ್ನು "ಮಗ" ಎಂದು ಕರೆದದ್ದರ ಅರ್ಥವು ಆತನು ಇಸಾಕನಂತೆ ಚಿಕ್ಕ ಮಗುವಾಗಿದ್ದನು ಎಂದಾಗುವದಿಲ್ಲ.

ಈ ಮನೆಯವರು ವೈಯಕ್ತಿಕ ಭಾವಗಳಿಗಿಂತಲೂ ಹೆಚ್ಚು ಪ್ರಾಮುಖ್ಯವಾದ ಸಂಗತಿಯನ್ನು ಎದುರಿಸುತ್ತಿದ್ದರು. ಯೆಹೋವನು ಯಾರ ಮೂಲಕವಾಗಿ ಮೂಲಪಿತೃವಿನ ಸಂತತಿಯವರನ್ನು ಆಶೀರ್ವದಿಸಲಿದ್ದನೋ, ಮತ್ತು ಅಂತಿಮವಾಗಿ, ಭೂಮಿಯ ಮೇಲಿರುವ ಎಲ್ಲಾ ಕುಟುಂಬಗಳನ್ನು ಆಶೀರ್ವದಿಸಲಿದ್ದನೋ ಆ ಸಾಧನವು ಇಸಾಕನೇ ಆಗಿದ್ದನು. ಆದದರಿಂದ, ದೇವರು ಸಾರಳ ವಿಷಯದಲ್ಲಿ ಅಬ್ರಹಾಮನಿಗೆ ಅಪ್ಪಣೆಗಳನ್ನು ನೀಡಿದನು: **ಸಾರಳು ಹೇಳಿದಂತೆಯೇ ಮಾಡು; ಇಸಾಕನಿಂದ ಹುಟ್ಟುವವರೇ ನಿನ್ನ ಸಂತತಿ ಅನ್ನಿಸಿಕೊಳ್ಳುವರು** (ನೋಡಿರಿ 12:2, 3; 17:19). ಸರಳವಾಗಿ ಹೇಳುವದಾದರೆ, ಒಡಂಬಡಿಕೆಯ ಆಶೀರ್ವಾದಗಳಲ್ಲಿ ಇಸಾಕನಿಗೆ ಒಂದು ವಿಶೇಷವಾದ ಸ್ಥಾನವಿತ್ತು, ಮತ್ತು ದೇವರ ಜನಾಂಗದ ಭವಿಷ್ಯದಲ್ಲಿನ ಪೀಳಿಗೆಗಳು ಅವರ ವಂಶಾವಳಿಯನ್ನು ಅಬ್ರಹಾಮ, ವಾಗ್ದಾನ ಮಗನಾಗಿರುವ ಇಸಾಕ ಮೂಲಕವಾಗಿ ಬಂದವರೆಂದು ಪಠನೆ ಮಾಡಲಿದ್ದರು.

ದೇವರು ಹಲವಾರು ಕಾರಣಗಳಿಗೋಸ್ಕರ ಹಾರಗಳನ್ನು ಮತ್ತು ಇಸ್ಮಾಯೇಲನನ್ನು ಹೊರಗೆ ಕಳುಹಿಸಬೇಕೆಂದು ಅಬ್ರಹಾಮನಿಗೆ ಬುದ್ಧಿವಾದ ಹೇಳಿದ್ದನು. (1) ಮೂಲಪಿತೃವು ಇಬ್ಬರನ್ನೂ ಪ್ರೀತಿಸುತ್ತಿದ್ದನು, ಮತ್ತು ದಾಸಿಯಾದ ತನ್ನ ಹೆಂಡತಿಯನ್ನು ಮತ್ತು ತನ್ನ ಚೊಚ್ಚಲ ಮಗನನ್ನು ಹೊರಕ್ಕೆ ಹಾಕುವುದು ಅವನ ಹೃದಯವನ್ನು ಒಡೆದು ಹಾಕಿತ್ತು. (2) ಅಬ್ರಹಾಮನು ಕಳೆದ ಬಾರಿ ಸಾರಳ ಮಾತಿಗೆ ವಿಧೇಯನಾಗಿ ಹಾಗರಳಿಂದ ಮಗನನ್ನು ಪಡೆದ ಘಟನೆಯನ್ನು ನೆನಪಿಸಿಕೊಂಡನು. ಅವಳ ಯೋಜನೆ ಮತ್ತು ಇವನು ಅದರಲ್ಲಿ ಭಾಗಿಯಾಗಿದ್ದದ್ದು ಅವರಿಬ್ಬರಿಗೂ ನಂಬಿಕೆಯ ಕೊರತೆಯಿತ್ತೆಂಬುದನ್ನು ತೋರಿಸಿ ಕೊಟ್ಟಿತ್ತು, ಮತ್ತು ಇದು ಅವರ ಮನೆಯಲ್ಲಿ ಎಲ್ಲಾ ವಿಧವಾದ ಸಮಸ್ಯೆಗಳಿಗೆ ಕಾರಣವಾಗಿತ್ತು (16:1-6). (3) ಅಬ್ರಹಾಮನು ಯಾವ ಪ್ರಾಚೀನ ಮಧ್ಯಪ್ರಾಚ್ಯದ ಸಂಸ್ಕೃತಿಯ ಅಡಿಯಲ್ಲಿ ಜೀವಿಸುತ್ತಿದ್ದನೋ ಆ ಸಂಸ್ಕೃತಿಯ ಪ್ರಕಾರವಾಗಿ, ಕುಟುಂಬದ ನೀತಿಯನ್ನು ನಿರ್ಧರಿಸುವ ಅಧಿಕಾರವು ಆತನಿಗೆ ಇತ್ತು - ಆತನ ಹೆಂಡತಿಗೆ ಇರಲಿಲ್ಲ. ಈ ಕಾರಣಕ್ಕಾಗಿ, ಆತನು ಒಂದು ವಿಧದಲ್ಲಿ ಹೆಂಡತಿಯ ಬಯಕೆಗಳಿಗೆ ಒಪ್ಪಿಸಿ ಕೊಡು ಎಂಬ ದೇವರ ಆಜ್ಞೆಗೆ ಅಸಮಾಧಾನ ಪಟ್ಟಿರಬಹುದಾಗಿದೆ ಯಾಕೆಂದರೆ ಅವುಗಳು ಮೂಲಪಿತೃವಿನ ಯೋಜನೆಗಳಿಗಿಂತಲೂ ದೈವಿಕ ಯೋಜನೆಗಳೊಂದಿಗೆ ಹೆಚ್ಚು ಸಹಮತದಲ್ಲಿದ್ದವು.

**ವಚನ 13.** ಒಟ್ಟಾರೆಯಾಗಿ, 17:20ರಲ್ಲಿ ದೇವರು ಇಸ್ಮಾಯೇಲನ ಕುರಿತು ಮಾಡಿದ್ದ ವಾಗ್ದಾನವನ್ನು ಪುನಃ ಅಬ್ರಹಾಮನಿಗೆ ತಿಳಿಸುತ್ತಾನೆ: "ಅವನಿಗೆ ಅತ್ಯಧಿಕವಾದ ಸಂತಾನವನ್ನು

ಕೊಡುವೆನು." ಆತನ ಚೊಚ್ಚಲ ಮಗನು ಅವನ ತಾಯಿಯ ಸಮೇತವಾಗಿ ಹೊರಗೆ ಕಳುಹಿಸಲ್ಪಟ್ಟ ಬಳಿಕ ನಾಶಗೊಳ್ಳುವದಿಲ್ಲ ಎಂದು ಮಲಪಿತೃವಿಗೆ ಭರವಸವನ್ನು ನೀಡುವದಕ್ಕೋಸ್ಕರ, ಯೆಹೋವನು ಮುಂದುವರೆಸಿ ಹೀಗೆ ಹೇಳಿದನು, **ಈ ದಾಸಿಯ ಮಗನು ನಿನ್ನಿಂದ ಹುಟ್ಟಿದವನಾದ್ದರಿಂದ ಅವನಿಂದಲೂ ಜನಾಂಗವಾಗುವಂತೆ ಮಾಡುವೆನು.** ಈ ವಿಧದಲ್ಲಿ, ಸಂತೈಸುವ ಮಾತುಗಳಿಂದ ಕಳವಳಗೊಂಡಿದ್ದ ಮೂಲಪಿತೃವಿನ ಹೃದಯವನ್ನು ದೇವರು ಶಾಂತಗೊಳಿಸಿದನು. ಅಲ್ಲದೆ, 13ನೇ ವಚನದಲ್ಲಿ ಇಸ್ಮಾಯೇಲನಿಗೆ ಮಾಡಿದ ವಾಗ್ದಾನವನ್ನು ಆತನು ಈ ಮುಂಚೆ 12ನೇ ವಚನದಲ್ಲಿ ಇಸಾಕನ ವಿಷಯದಲ್ಲಿ ನೀಡಿದ್ದ ಭರವಸದೊಂದಿಗೆ ಜೋಡನೆ ಮಾಡಿದನು.

**ವಚನ 14.** ಅಬ್ರಹಾಮನು ತನ್ನ ದಾಸಿ-ಹೆಂಡತಿಯನ್ನು ಮತ್ತು ತನ್ನ ಚೊಚ್ಚಲ ಮಗನನ್ನು ಮನೆಯಿಂದ ಹೊರಕ್ಕೆ ಕಳುಹಿಸುವಂಥ ಹೃದಯ-ಒಡೆಯುವ ಗುರಿಯನ್ನು ಎದುರಿಸುವ ವೇಳೆಯಲ್ಲಿನ ರಾತ್ರಿಯಲ್ಲಿ ನಿದ್ದೆಯನ್ನೇ ಮಾಡಲಿಲ್ಲ. ಅವರನ್ನು ತಾನು ಪುನಃ ನೋಡುವೆನೆಂಬ ನಿರೀಕ್ಷೆಯು ಸ್ವಲ್ಪವೂ ಇರಲಿಲ್ಲ. ಕಳವಳದಿಂದ ಕೂಡಿದ ರಾತ್ರಿಯನ್ನು ಕಳೆಯುವದು ಪಕ್ಕಕ್ಕೆ ಇರಲಿ, ಮಧ್ಯಾಹ್ನದ ಬಿಸಿಲು ವೇದನೆಯುಂಟು ಮಾಡುವ ಮುಂಚೆಯೇ ಮುಂಜಾನೆಯ ತಂಗಾಳಿಯಲ್ಲಿಯೇ ಹಾಗರ ಮತ್ತು ಇಸ್ಮಾಯೇಲರು ಪ್ರಯಾಣವನ್ನು ಆರಂಭಿಸಿ ಸಾಧ್ಯವಾದಷ್ಟು ದೂರ ಸಾಗಬೇಕೆಂಬುದು ಬಹುಶಃ ಮೂಲಪಿತೃವಿನ ಬಯಕೆಯಾಗಿತ್ತು. ಆದದರಿಂದ, ವಾಕ್ಯವು ಹೇಳುವದೇನೆಂದರೆ **ಮಾರಣೇ ದಿನ ಬೆಳಿಗ್ಗೆ ಅಬ್ರಹಾಮನು ಎದ್ದು ಹಾಗರಳಿಗೆ ಬುತ್ತಿಯನ್ನೂ ಒಂದು ತಿತ್ತಿ ತಣ್ಣೀರನ್ನೂ ಕೊಟ್ಟನು.**

ಮೂಲಪಿತೃವು ಅವರ ಅರಣ್ಯದಲ್ಲಿನ ಪ್ರಯಾಣಕ್ಕಾಗಿ ಬುತ್ತಿ ಮತ್ತು ಒಂದು ತಿತ್ತಿ ತಣ್ಣೀರುಗಿಂತಲೂ[7] ಹೆಚ್ಚಾದದ್ದನ್ನು ಏಕೆ ಕೊಡಲಿಲ್ಲ ಎಂದು ವಾಚಕನು ಚಕಿತಗೊಳ್ಳಬಹುದು. ಅವರಿಗೆ ದಾರಿಯ ಮಧ್ಯದಲ್ಲಿ ಇನ್ನಷ್ಟು ಅಗತ್ಯ ವಸ್ತುಗಳು ಹುಡುಕಿಕೊಳ್ಳಲಿ ಎಂಬುದು ಆತನ ನಿರೀಕ್ಷೆಯಾಗಿತ್ತೋ? ಅವರು ಹೆಚ್ಚು ದೂರಕ್ಕೆ ಪ್ರಯಾಣಿಸದಿರಲಿ, ಅಷ್ಟೊತ್ತಿಗೆ ಸಾರಳ ಕೋಪವು ತಣ್ಣಗಾಗುವುದು ಮತ್ತು ಇವರು ಪುನಃ ಮನೆಗೆ ಹಿಂದಿರುಗಲು ಶಕ್ತರಾಗುವರು ಎಂಬ ಒಂದು ರಹಸ್ಯವಾದ ಉದ್ದೇಶವು ಅಬ್ರಹಾಮನಿಗೆ ಇತ್ತೋ?

ಬಹುಶಃ ಶೋಕದಲ್ಲಿದ್ದ ಗಂಡ ಮತ್ತು ತಂದೆಯಾದ ಅಬ್ರಹಾಮನು, ಈ ಮುಂಚೆ ಹಾಗರಳು ಅರಣ್ಯಕ್ಕೆ ಪಲಾಯನ ಮಾಡಿದಾಗ, "ಶೂರಿನ ಮಾರ್ಗದ ಒರತೆಯ ಹತ್ತಿರ ಇರುವಾಗ ಯೆಹೋವನ ದೂತನು ಅವಳನ್ನು ಕಂಡು" ಮನೆಗೆ ಹಿಂದಿರುಗಿ ಕಳುಹಿಸಿ ಕೊಟ್ಟಿದ್ದನ್ನು ನೆನಪಿಸಿಕೊಂಡಿರುವ ಸಾಧ್ಯತೆಯಿದೆ (16:7-14). ಆಕೆಗೆ ಮತ್ತು ಇಸ್ಮಾಯೇಲನಿಗೆ ಈ ಸಾರಿ ಅದೇ ರೀತಿಯ ಅನುಭವಾಗಲಿತ್ತೋ? ಖಂಡಿತವಾಗಿಯೂ, ಮೂಲಪಿತೃವಿನ ಮನಸ್ಸಿನಲ್ಲಿ ಯಾವ ಯೋಚನೆಗಳು ಓಡಾಡುತ್ತಿದ್ದವೆಂಬುದು ನಮಗೆ ತಿಳಿದಿರುವದಿಲ್ಲ; ಆದರೆ, ಏನೇ ಯೋಚನೆಗಳಿದ್ದಿದ್ದರೂ, ಅರಣ್ಯದೊಳಗೆ ಸುಡು ಬಿಸಿಲಿನಲ್ಲಿ ಪ್ರಯಾಣಿಸುವ ವೇಳೆ ಅವರಿಬ್ಬರಿಗೂ ಒಂದು ದಿನಕ್ಕಾದರೂ ಸಾಕಾಗುವಷ್ಟು ನೀರನ್ನು ಆತನು ಕೊಡಲಿಲ್ಲ.[8] ದೇವರು ಹೇಗೋ ಒಂದು ವಿಧದಲ್ಲಿ ಮಧ್ಯಪ್ರವೇಶಿಸಿ ಆ ಹಾಳುಭೂಮಿಯಲ್ಲಿ ನಾಶವಾಗದಂತೆ ಅವರನ್ನು ಕಾಪಾಡುವನು ಎಂದು ಆತನು ನಂಬಿದ್ದನು.

ಅಬ್ರಹಾಮನು **ಅವಳ ಹೆಗಲಿನ ಮೇಲೆ ಇಟ್ಟು ಮಗುವನ್ನು ಒಪ್ಪಿಸಿ ಕಳುಹಿಸಿಬಿಟ್ಟನು** ಎಂಬ ಹೇಳಿಕೆಯಲ್ಲಿ ಇನ್ನೊಂದು ಸಮಸ್ಯೆಯು ಉದ್ಭವವಾಗುತ್ತದೆ. ಹಾಗರಳು ಅವಳ ಹೆಗಲ ಮೇಲೆ ನಿಖರವಾಗಿ ಏನನ್ನು ಹೊತ್ತುಕೊಂಡಿದ್ದಳು? LXX ಮತ್ತು ಸಿರಿಯದ Peshitta ಅನುವಾದಗಳು ಸೂಚಿಸುವದೇನೆಂದರೆ, ರೊಟ್ಟಿ ಮತ್ತು ನೀರಿನ ಜೊತೆಯಲ್ಲಿ, ಅಬ್ರಹಾಮನು

ಮಗುವನ್ನು (ಇಸ್ಮಾಯೇಲ) ಅವಳ ಹೆಗಲ ಮೇಲೆ ಹೊರಿಸಿದನು ಎಂಬುದೆ. ಹಲವಾರು ಆಧುನಿಕ ವ್ಯಾಖ್ಯಾನ ಗ್ರಂಥಗಳು ಮತ್ತು ಅನುವಾದಗಳು ಇದೇ ರೀತಿಯ ಅನುವಾದವನ್ನು ಒದಗಿಸುತ್ತವೆ (RSV; NRSV; NEB; REB; NAB; JB; NJB; TEV; NJPSV; NCV; CEV; ESV). ಅದರ ಜೊತೆಗೆ, ಕೆಲವೊಂದು ಬೈಬಲಿನ ಸಂದೇಹವಾದಿಗಳು ಆದಿಕಾಂಡದ ಲೇಖಕನು ಈ ಕಥಾನಿರೂಪಣೆಯನ್ನು ಸಂಯೋಜಿಸುವ ವೇಳೆ ತದ್ವಿರುದ್ಧವಾದ ಮೂಲಗಳನ್ನು ಬಳಸಿಕೊಂಡನು ಎಂಬ ಆಲೋಚನೆಗೆ ಬೆಂಬಲವಾಗಿ ಈ ರೀತಿಯ ವಿಚಾರಧಾರೆಯಲ್ಲಿ ವಾದಿಸುತ್ತಾರೆ. ಹಾಗರಳು ಹದಿಹರೆಯದ ಹುಡುಗನನ್ನು ತನ್ನ ಹೆಗಲ ಮೇಲೆ ಹೊತ್ತುಕೊಂಡು ಸಾಗಲು ಶಕ್ತಳಾಗಿರಲು ಸಾಧ್ಯವಿರಲಿಲ್ಲ; ಆದದರಿಂದ, ಇಸ್ಮಾಯೇಲನು ಬಹುಶಃ ಆ ಸಮಯದಲ್ಲಿ ಕೇವಲ ಒಬ್ಬ ಚಿಕ್ಕ ಬಾಲಕ ಅಥವಾ ಮಗು ಆಗಿದ್ದನು ಎಂಬುದಾಗಿ 21:9ರಲ್ಲಿ ಚರ್ಚೆ ಮತ್ತು 16:1-4, 16ರಲ್ಲಿನ ಕಾಲಾನುಕ್ರಮದಕ್ಕೆ ತದ್ವಿರುದ್ಧವಾಗಿರುವ ವಾದವು ಇಲ್ಲಿರುತ್ತದೆ.

ಇಬ್ರಿಯ ವಾಕ್ಯರಚನೆಯು ಒಂದು ವಿಧದಲ್ಲಿ ವಿಚಿತ್ರವಾಗಿದೆಯಾದರೂ, NASB ಮತ್ತು NIVಗಳಲ್ಲಿ ಸ್ಪಷ್ಟವಾಗಿರುವ ಪ್ರಕಾರ, ಇದು ವಾಕ್ಯವನ್ನು ಅರ್ಥಮಾಡಿಕೊಳ್ಳುವದಕ್ಕಿರುವ ಏಕೈಕ - ಅಥವಾ ಉತ್ತಮ ದಾರಿ ಆಗಿರುವದಿಲ್ಲ. ಇಬ್ರಿಯ ವಾಕ್ಯದ ಒಂದು ಅಕ್ಷರಶಃ ಅನುವಾದವು ಈ ಮುಂದಿನಂತೆ ಇರುತ್ತದೆ: "ಮತ್ತು ಅಬ್ರಹಾಮನು ಮರುದಿನ ಮುಂಜಾನೆ ಎದ್ದು ರೊಟ್ಟಿ ಮತ್ತು ನೀರಿನ ತಿತ್ತಿಯನ್ನು ತೆಗೆದುಕೊಂಡನು, ಮತ್ತು [ಅವುಗಳನ್ನು] ಹಾಗರಳಿಗೆ ಕೊಡುವವನಾಗಿ [ಅವುಗಳನ್ನು] ಆಕೆಯ ಹೆಗಲ ಮೇಲೆ ಇಟ್ಟನು, ಮತ್ತು [ಆಕೆಗೆ] ಹುಡುಗನನ್ನು ಒಪ್ಪಿಸಿ ಕಳುಹಿಸಿ ಕೊಟ್ಟನು."[9]

21:10ರಲ್ಲಿರುವ "ಹೊರಗೆ ಹಾಕು" *(ಗಾರಾಶ್)* ಎಂಬ ಪದದ ರೀತಿಯಲ್ಲಿಯೇ, "ಕಳುಹಿಸಿಬಿಟ್ಟನು" (שָׁלַח, *ಶಾಲಾಚ್)* ಎಂಬ ಮಾತು ಸಹ ಮುಂದೆ "ವಿಚ್ಛೇದನ" ಎಂಬ ಅರ್ಥವನ್ನು ಕೊಡುವದಾಗಿ ಮಾರ್ಪಟ್ಟಿತ್ತು (ಧರ್ಮೋಪದೇಶಕಾಂಡ 22:19, 29; ಯೆಶಾಯ 50:1; ಯೆರೆಮೀಯ 3:1; ಮಲಾಕಿ 2:16). ಹೇಗೂ, ಈ ಎರಡನೆಯ ಪದವು ಮೊದಲಿನ ಪದದಷ್ಟು ಕಠೋರವಾಗಿರುವಂತೆ ಕಾಣಿಸುವದಿಲ್ಲ. ಸಾರಳ ಬಯಕೆಯು ಅಬ್ರಹಾಮನು "ಈ ದಾಸಿಯನ್ನು ಹೊರಗೆ ಹಾಕ"ಬೇಕು ಎಂದಾಗಿತ್ತಾದರೂ ಆತನು ಆಕೆಯನ್ನು "ಕಳುಹಿಸಿಬಿಟ್ಟನು." ಆತನ ಕೃತ್ಯಗಳು ದುರುದ್ದೇಶದಿಂದ ಕೂಡಿರಲಿಲ್ಲ; ಬದಲಾಗಿ, ಆತನು ಕೇವಲ ದೇವರ ಚಿತ್ತಕ್ಕೆ ತನ್ನನ್ನು ಒಪ್ಪಿಸಿಕೊಳ್ಳುತ್ತಿದ್ದಾನಷ್ಟೆ.

ಮುಂದಿನ ಹೇಳಿಕೆಯು ಹಾರಗಳನ್ನು ಒಬ್ಬ ನಿರೀಕ್ಷೆಯಿಲ್ಲದ ಅಲೆಮಾರಿಯಂತೆ ಚಿತ್ರಿಸುತ್ತದೆ. **ಅವಳು ಹೊರಟು ಬೇರ್ಷೆಬದ ಕಾಡಿನಲ್ಲಿ ಅಲೆಯುತ್ತಿದ್ದಳು.** 16ನೇ ಅಧ್ಯಾಯದಲ್ಲಿ ಆಕೆಯು ಪಲಾಯನ ಮಾಡಿ ಐಗುಪ್ತಕ್ಕೆ ಹೋಗಲು ಪ್ರಯತ್ನಿಸಿದ್ದಕ್ಕೆ ವಿರುದ್ಧವಾಗಿ, ಈಗ ಅವಳ ಮನಸ್ಸಿನಲ್ಲಿ ಯಾವ ಸ್ಥಳಕ್ಕೆ ಹೋಗಬೇಕೆಂಬ ಗುರಿಯು ಇರಲಿಲ್ಲ. ಆಕೆ ಮತ್ತು ಆಕೆಯ ಮಗನು ಪ್ರಾಚೀನ ಕಾನಾನಿನ ದಕ್ಷಿಣದ ಭಾಗದಲ್ಲಿ, ಬೇರ್ಷೆಬದ ಅರಣ್ಯದಲ್ಲಿ ಅಲೆದಾಡುತ್ತಿದ್ದರು. ಸ್ಪಷ್ಟವಾಗಿರುವಂತೆ ಅಬ್ರಹಾಮನು ಈಗಲೂ ಗೆರಾರಿನ ಪ್ರದೇಶದಲ್ಲಿಯೇ ಜೀವಿಸುತ್ತಿದ್ದನು, ಅಲ್ಲಿಯೇ ಅಬೀಮೆಲೆಕನು ಅರಸನಾಗಿದ್ದನು (ನೋಡಿರಿ 20:1; 21:22-34). ಬಹಳ ಸಂಭಾವ್ಯವಾಗಿ, ಈ ಹೊರಹಾಕಲ್ಪಟ್ಟವರು ಪೂರ್ವದ ಕಡೆಗೆ, ಸಂಭಾವ್ಯವಾಗಿ ಉತ್ತರದ ಅರಬ್ಬಿಯದ ಕಡೆಗೆ ಪ್ರಯಾಣಿಸುತ್ತಿದ್ದರೆಂದು ಕಾಣಿಸುತ್ತದೆ, ಆ ಪ್ರದೇಶದಲ್ಲಿಯೇ ಇಸ್ಮಾಯೇಲನಲ್ಲಿ ಅನಂತರ ಹುಟ್ಟಿದ ಸಂತತಿಯವರು ನೆಲೆಸಿದ್ದರು (25:12-18). ಅವರು ಬೇರ್ಷೆಬದ ಅರಣ್ಯದಲ್ಲಿ ನಡೆದಾಡುತ್ತಿದ್ದರು ಎಂಬ ವಾಸ್ತವಾಂಶವು ಒಂದು ವಿಧದಲ್ಲಿ

ವ್ಯಂಗ್ಯಾತ್ಮಕವಾಗಿರುತ್ತದೆ ಯಾಕೆಂದರೆ ಹೆಸರಿನ ಮೊದಲನೆಯ ಭಾಗವು ಒಂದು "ಬಾವಿ" ಯನ್ನು ಉಲ್ಲೇಖಿಸುತ್ತದೆ (בְּאֵר, *ಬೇರ್*). ಅಲ್ಲಿ ಬಾವಿಯು ಇತ್ತಾದರೂ, ದೇವದೂತನು ಆಕೆಗೆ ಅದನ್ನು ತೋರಿಸುವ ತನಕವೂ ಹಾಗರಳಿಗೆ ಅದು ಕಂಡಿರಲಿಲ್ಲ.

## ಹಾಗರಳಿಗೆ ದೈವಿಕ ವಾಗ್ದಾನ (21:15-21)

**[15]ತಿತ್ತಿಯಲ್ಲಿದ್ದ ನೀರು ಮುಗಿದ ಮೇಲೆ ಅವಳು ಮಗುವನ್ನು ಒಂದು ಗಿಡದ ನೆರಳಿನಲ್ಲಿ ಹಾಕಿ**
**[16]ಮಗುವು ಸಾಯುವದನ್ನು ನೋಡಲಾರೆನು ಅಂದುಕೊಂಡು ಬಿಲ್ಲೆಸುಗೆಯಷ್ಟು ದೂರ ಹೋಗಿ**
**ಅವನೆದುರಾಗಿ ಕೂತುಕೊಂಡು ಗಟ್ಟಿಯಾಗಿ ಅತ್ತಳು. [17]ಆ ಹುಡುಗನ ಮೊರೆಯು ದೇವರಿಗೆ**
**ಕೇಳಿಸಿತು; ದೇವದೂತನು ಆಕಾಶದಿಂದ ಹಾಗರಳನ್ನು ಕರೆದು - ಹಾಗರಳೇ, ನಿನಗೇನಾಯಿತು?**
**ಅಂಜಬೇಡ; ಆ ಹುಡುಗನು ಬಿದ್ದಿರುವ ಸ್ಥಳದಿಂದಲೇ ಅವನ ಶಬ್ದವು ದೇವರಿಗೆ ಕೇಳಿಸಿತು;**
**[18]ನೀನೆದ್ದು ಅವನನ್ನು ಎತ್ತಿಕೊಂಡು ಕೈಬಿಡದೆ ಇರು; ಅವನಿಂದ ದೊಡ್ಡ ಜನಾಂಗವಾಗುವಂತೆ**
**ಮಾಡುವೆನು ಎಂದು ಹೇಳಿದನು. [19]ಇದಲ್ಲದೆ ದೇವರು ಅವಳ ಕಣ್ಣನ್ನು ತೆರೆದದರಿಂದ ಅವಳು**
**ನೀರಿನ ಬಾವಿಯನ್ನು ಕಂಡು ತಿತ್ತಿಯಲ್ಲಿ ನೀರನ್ನು ತುಂಬಿಕೊಂಡು ಹುಡುಗನಿಗೆ ಕುಡಿಸಿದಳು.**
**[20]ದೇವರು ಆ ಹುಡುಗನ ಸಂಗಡ ಇದ್ದನು; ಅವನು ಬೆಳೆದು ಕಾಡಿನಲ್ಲಿ ವಾಸವಾಗಿದ್ದು**
**ಬಿಲ್ಲುಗಾರನಾದನು. [21]ಅವನು ಪಾರಾನಿನ ಅರಣ್ಯದಲ್ಲಿ ವಾಸಮಾಡಿದನು. ಅವನ ತಾಯಿ**
**ಐಗುಪ್ತದೇಶದಿಂದ ಕನ್ನಿಕೆಯನ್ನು ತರಿಸಿ ಮದುವೆಮಾಡಿಸಿದಳು.**

**ವಚನ 15.** ಹಾಗರಳು ಮತ್ತು ಇಸ್ಮಾಯೇಲ ಇವರಿಬ್ಬರು ಅರಣ್ಯದ ಮೂಲಕವಾಗಿ ಒಂದು ದಿನ ಪ್ರಯಾಣವನ್ನು ಮಾಡುವದಕ್ಕೆ ಸಾಕಷ್ಟು ನೀರನ್ನು ತಂದಿರಲಿಲ್ಲವಾದ್ದರಿಂದ, ಮದ್ಯಾಹ್ನದ ಬಿಸಿಲು ಅವರ ಮೇಲೆ ಕಠೋರವಾದ ಪರಿಣಾಮ ಬೀರಿತ್ತು. **ತಿತ್ತಿಯಲ್ಲಿದ್ದ ನೀರು ಮುಗಿದ ಮೇಲೆ** ಅವರಿಗೆ ಇನ್ನು ಮೇಲೆ ತಮ್ಮ ದಾಹವನ್ನು ತೀರಿಸಿಕೊಳ್ಳಲಾಗಲಿಲ್ಲ, ಹಾಗರಳು **ಮಗುವನ್ನು ಒಂದು ಗಿಡದ ನೆರಳಿನಲ್ಲಿ ಹಾಕಿ**ದಳು. ಒಬ್ಬ ತಲ್ಲಣಗೊಂಡಿರುವ ತಾಯಿಯು ತನ್ನ ಮಗನನ್ನು ಮರಳುಗಾಡಿನಲ್ಲಿ ಬೆಳೆಯುವ ಒಂದು ಪೊದೆಯ ಕೆಳಗೆ ಮಲಗಿಸುವಂಥ ವರ್ಣನಾತ್ಮಕ ಚಿತ್ರಣವನ್ನು ವಾಕ್ಯವು ಒದಗಿಸುತ್ತದೆ. ಇಲ್ಲಿ ಸೂಚ್ಯಾರ್ಥವು ಆಕೆಗೆ ತನ್ನ ಮಗನು ಬದುಕುವ ಬಗ್ಗೆ ನಿರೀಕ್ಷೆಯು ಇರಲಿಲ್ಲ ಮತ್ತು ಅವನಿಗೆ ಮರಣವು ಸನ್ನಿಹಿತವಾಗಿದೆ ಎಂದು ಎದುರುನೋಡುತ್ತಿದ್ದಳು ಎಂದಾಗಿರುತ್ತದೆ. ಆತನನ್ನು ನೆರಳಿನಲ್ಲಿಡುವ ಮೂಲಕ, ಸೂರ್ಯನ ಕಿರಣಗಳು ನೇರವಾಗಿ ಬೀಳದಂತೆ ಅವನಿಗೆ ಸ್ವಲ್ಪ ಉಪಶಮನವನ್ನು ಒದಗಿಸುತ್ತಿದ್ದಾಳೆ ಮತ್ತು ಆತನ ಕೊನೆಯ ಕ್ಷಣಗಳನ್ನು ಸಾಧ್ಯವಾದಷ್ಟು ಸುಖಕರವಾಗಿರಲೆಂದು ಪ್ರಯತ್ನಿಸುತ್ತಿದ್ದಳು.

**ವಚನ 16.** ಇಸ್ಮಾಯೇಲನು ಪಡುತ್ತಿರುವ ಬಾಧೆಯನ್ನು ಹಾಗರಳಿಗೆ ನೋಡುವದಕ್ಕಾಗಲಿಲ್ಲ; ಆದ್ದರಿಂದ ಅವಳು **ಬಿಲ್ಲೆಸುಗೆಯಷ್ಟು**, ಅಂದರೆ ಒಬ್ಬ ವ್ಯಕ್ತಿಯು ಒಂದು ಬಾಣವನ್ನು ಬಿಡುವದಕ್ಕಾಗುವಷ್ಟು **ದೂರ ಹೋಗಿ ಅವನೆದುರಾಗಿ ಕೂತುಕೊಂಡು ಗಟ್ಟಿಯಾಗಿ ಅತ್ತಳು**. ಆಕೆಗೆ ಅವನನ್ನು ನೋಡುವದಕ್ಕಾಗದೆ ಇದ್ದಿರಬಹುದು, ಆದರೂ ಆಕೆಗೆ ಸಹಾಯಕ್ಕಾಗಿ ಕೂಗುವ ಯಾವದೇ ಮೊರೆಯು ಕೇಳಿಸುವಷ್ಟರ ಮಟ್ಟಿಗೆ ಸಮೀಪದಲ್ಲಿ ಅವಳು ಇದ್ದಿರಬಹುದಾಗಿದೆ. ಅದರಿಂದ ಸಹ ಯಾವದೇ ಪ್ರಯೋಜನವೂ ಇಲ್ಲದೆ ಇದ್ದಿರಬಹುದು, ಯಾಕೆಂದರೆ ಒಣಗಿದ ಗಂಟಲಿನಿಂದಿರುವ, ಬಿಸಿಲ ತಾಪದಿಂದ ಬಳಲಿಕೆ ಮತ್ತು ನಿರ್ಜಲೀಕರಣದಿಂದ ಸಾಯುತ್ತಿರುವ ಒಬ್ಬ ವ್ಯಕ್ತಿಯು ಅಷ್ಟೊಂದು ಜೋರಾಗಿ ಕೂಗುವದಕ್ಕೆ ಅಶಕ್ತನಾಗಿರುತ್ತಿದ್ದನು. ಹಾಗರಳು ಕುಳಿತುಕೊಂಡು, ತನ್ನ ಮಗನ ವಿರುದ್ಧವಾಗಿ ನಡೆದು

ಬರುತ್ತಿರುವ ಮರಣವನ್ನು ತಡೆಯುವದಕ್ಕೆ ಅಸಹಾಯಕಳಾಗಿ ಇರುವ ವೇಳೆ, ಆಕೆಯು ಒಂದು ಹತಾಶೆಯ ಪ್ರಾರ್ಥನೆಯನ್ನು ಉಚ್ಛರಿಸಿದಳು: **ಮಗುವು ಸಾಯುವದನ್ನು ನೋಡಲಾರೆನು**. ಇಸ್ಮಾಯೇಲನು, ಅಥವಾ ಅವಳಾಗಲಿ ಬದುಕುಳಿಯಲು ಇದ್ದ ಏಕೈಕ ನಿರೀಕ್ಷೆಯೆಂದರೆ, ದೈವಿಕ ಮಧ್ಯಪ್ರವೇಶಿಸುವಿಕೆಯೇ; ಆದ್ದರಿಂದ ಅವಳು **ಗಟ್ಟಿಯಾಗಿ ಅತ್ತಳು**.

**ವಚನ 17.** ಈ ಹೃದಯ ಸ್ಪರ್ಶಿ ಕ್ಷಣದಲ್ಲಿ, **ಆ ಹುಡುಗನ ಮೊರೆಯು ದೇವರಿಗೆ ಕೇಳಿಸಿತು**. ಆಗ **ದೇವದೂತನು ಆಕಾಶದಿಂದ ಹಾಗರಳನ್ನು ಕರೆದು - ಹಾಗರಳೇ, ನಿನಗೇನಾಯಿತು?** ಎಂದು ಕೇಳಿದನು. ಇದರ ಉದ್ದೇಶವು ನಿಶ್ಚಯವಾಗಿಯೂ ಒಂದು ಭಾವೋತ್ತೇಜಕ ಪ್ರಶ್ನೆಯಾಗಿತ್ತು, ಯಾಕೆಂದರೆ ದೇವದೂತನು ಆಕೆಗೆ ಉತ್ತರ ಹೇಳುವದಕ್ಕೆ ಅವಕಾಶವನ್ನು ಕೊಡಲಿಲ್ಲ. ಬದಲಾಗಿ, ಆತನು ತಕ್ಷಣವೇ ಈ ಪ್ರಶ್ನೆಯ ಬಳಿಕ ಪ್ರೋತ್ಸಾಹದ ಮಾತುಗಳನ್ನಾಡಿದನು: **ಅಂಜಬೇಡ; ಆ ಹುಡುಗನು ಬಿದ್ದಿರುವ ಸ್ಥಳದಿಂದಲೇ ಅವನ ಶಬ್ದವು ದೇವರಿಗೆ ಕೇಳಿಸಿತು** (16:11; 17:20ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಈ ಭರವಸೆಯ ಹೇಳಿಕೆಯು ಅಬ್ರಹಾಮನು ತನ್ನ ಇಬ್ಬರು ಪ್ರಿಯರನ್ನು ಸಾಕಷ್ಟು ಅನ್ನಪಾನಗಳನ್ನು ಕೊಡದೆ (21:14) ಅರಣ್ಯದೊಳಕ್ಕೆ ಹೇಗೆ ಕಳುಹಿಸಿರಲು ಸಾಧ್ಯ ಎಂಬ ಪ್ರಶ್ನೆಗೆ ಉತ್ತರವನ್ನು ಕೊಡುವದಾಗಿದೆ. ಆತನ ಜೀವಿತದಲ್ಲಿ ಈ ಹೊತ್ತಿಗೆಲ್ಲಾ, ಇವರನ್ನು ಯೆಹೋವನು ಕಾಯುವನು ಮತ್ತು ಅವರ ಕಠಿಣವಾದ ಪ್ರಯಾಣದಲ್ಲಿ ಒದಗಿಸಿ ಕೊಡುವನು ಎಂಬುದಾಗಿ ವಿಶ್ವಾಸವಿಡುವದಕ್ಕೆ ಮನಸ್ಸುಳ್ಳವನಾಗುವಷ್ಟರ ಮಟ್ಟಿಗೆ ಮೂಲಪಿತೃವಿನ ನಂಬಿಕೆಯು ನಿಶ್ಚಯವಾಗಿಯೂ ಬೆಳೆದಿತ್ತು.

**ವಚನ 18.** ಬಳಿಕ ದೇವದೂತನು ಹಾಗರಳಿಗೆ ಈ ನಿರಾಶಪೂರ್ಣ ಅರಣ್ಯವನ್ನು ದಾಟಿ ಇಸ್ಮಾಯೇಲನಿಗೆ ಒಂದು ಭವಿಷ್ಯವು ಇರುತ್ತದೆಂಬ ವಾಸ್ತವಾಂಶದ ಅರಿವು ಉಂಟುಮಾಡಿದನು. ಆತನು ಆಕೆಗೆ **ನೀನೆದ್ದು ಅವನನ್ನು ಎತ್ತಿಕೊಂಡು ಕೈಬಿಡದೆ ಇರು** ಎಂದು ಬುದ್ಧಿ ಹೇಳಿದನು. ವಾಕ್ಯವು ಅಕ್ಷರಶಃ ಹೇಳುವದೇನೆಂದರೆ, "ಅವನ ಮೇಲೆ ನಿನ್ನ ಹಸ್ತವನ್ನು ದೃಢವಾಗಿಟ್ಟುಕೋ." ಇದೊಂದು ಇಬ್ರಿಯ ಗಾದೆ ಆಗಿದ್ದು "ಅವನಿಗೆ ನಿನ್ನ ಪ್ರೋತ್ಸಾಹವನ್ನು ಕೊಡು"[10] ಎಂದರ್ಥವನ್ನು ಹೊಂದಿದೆ. ತರುವಾಯ ಪರಲೋಕದಿಂದ ಬಂದ ಸ್ವರವು ಅನೇಕ ವರ್ಷಗಳ ಹಿಂದೆ ಯೆಹೋವನ ದೂತನು ಹಾಗರಳಿಗೆ ಮಾಡಿದ್ದ ವಾಗ್ದಾನವನ್ನು ಪುನಃ ಒತ್ತಿ ಹೇಳಿತ್ತು. ದೇವರು ಈ ಸಾರಿ ಹೆಚ್ಚು ನಿರ್ದಿಷ್ಠವಾದ ರೀತಿಯಲ್ಲಿ ನುಡಿಯುವವನಾಗಿ, ಆಕೆಯ ಮಗನಾದ ಇಸ್ಮಾಯೇಲನಿಂದ **ದೊಡ್ಡ ಜನಾಂಗವಾಗುವಂತೆ ಮಾಡುವೆನು** ಎಂದು ವಾಗ್ದಾನ ನೀಡಿದನು (ನೋಡಿರಿ 16:10-12).

**ವಚನ 19.** ಯೆಹೋವನು ಇಸ್ಮಾಯೇಲನನ್ನು ಭವಿಷ್ಯದಲ್ಲಿ ಆಶೀರ್ವದಿಸಬೇಕೆಂದು ಆಸಕ್ತಿಯನ್ನು ಮಾತ್ರವೇ ಹೊಂದಿರಲಿಲ್ಲ, ಆದರೆ ಆತನು ಈಗಿದ್ದ ನಿರ್ಜಲೀಕರಣದ ಸ್ಥಿತಿಯ ಬಗ್ಗೆಯೂ ಕಾಳಜಿಯನ್ನು ಹೊಂದಿದ್ದನು, ಯಾಕೆಂದರೆ ನೀರಿನ ತಿತ್ತಿಯು ಸಂಪೂರ್ಣ ಖಾಲಿಯಾಗಿತ್ತು. ಆಕೆಯ ಪ್ರಾರ್ಥನೆಗೆ ಉತ್ತರ ಕೊಡುವವನಾಗಿ, **ದೇವರು ಅವಳ ಕಣ್ಣನ್ನು ತೆರೆದದರಿಂದ ಅವಳು ನೀರಿನ ಬಾವಿಯನ್ನು ಕಂಡಳು**. ಅವರು "ಬೇರ್ಷೆಬದ ಕಾಡಿನಲ್ಲಿ" ಇದ್ದದರಿಂದ (21:14ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ), ಬಾವಿಯು ಅಷ್ಟೊಂದು ಸಮಯದಿಂದಲೂ ಅಲ್ಲಿಯೇ ಇತ್ತು. ಹಾಗಿದ್ದರೂ, ಆಕೆಯು ನೀರಿನ ಮೂಲವನ್ನು ಕಂಡು ಹಿಡಿಯಲು ಇಷ್ಟವಿಲ್ಲದಷ್ಟರ ಮಟ್ಟಿಗೆ ತನ್ನ ನಿರೀಕ್ಷೆಯನ್ನು ಬಿಟ್ಟು ಬಿಟ್ಟಿದ್ದಳು, ಮತ್ತು ಆಕೆಯು ಅದನ್ನು ನೋಡಲಾಗದಷ್ಟರ ಮಟ್ಟಿಗೆ ಅವಳ ಕಣ್ಣುಗಳು ನೀರಿನಿಂದ ತುಂಬಿದ್ದವು ಎಂದು ಕಾಣಿಸುತ್ತದೆ. ಹಾಗರಳಿಗೆ ಈ ವಿಷಯದಲ್ಲಿ ದೂತನಿಂದ ಇನ್ನಷ್ಟು ಅಪ್ಪಣೆಯ ಅಗತ್ಯವಿರಲಿಲ್ಲ;

**ತಿತ್ತಿಯಲ್ಲಿ ನೀರನ್ನು ತುಂಬಿಕೊಂಡು ಹುಡುಗನಿಗೆ ಕುಡಿಸಿದಳು**. ಕಥನವು ಹಾಗರಳು ತನ್ನ ದಾಹವನ್ನು ತೀರಿಸಿಕೊಂಡಳೋ ಎಂಬುದರ ಬಗ್ಗೆ ಹೇಳುವದಿಲ್ಲ; ಬದಲಾಗಿ ತನ್ನ ಮಗನಿಗೆ ನೀರನ್ನು ಒದಗಿಸುವದೇ ಪ್ರಮುಖ ಕಳಕಳಿಯುಳ್ಳಂಥ ತಾಯಿಯಾಗಿ ಆಕೆಯು ಚಿತ್ರಿಸಲ್ಪಟ್ಟಿರುತ್ತಾಳೆ. ಇಸ್ಮಾಯೇಲನು ಚೇತರಿಸಿಕೊಂಡ ಬಳಿಕವಷ್ಟೇ ಆಕೆಯು ಜೀವ-ದಾಯಕ ನೀರನ್ನು ಸೇವಿಸಿದಳು.

**ವಚನ 20.** ಬೇರ್ಷೆಬದ ಕಾಡಿನಲ್ಲಿ ಹಾಗರಳು ಮತ್ತು ಇಸ್ಮಾಯೇಲನು ನಾಟಕೀಯವಾದ ಅನುಭವವನ್ನು ಹೊಂದಿದ ಬಳಿಕ, ಲೇಖಕನು ಆ ಹುಡುಗನ ಉಳಿದ ಜೀವನದ ಕುರಿತಾಗಿ ಕ್ಲುಪ್ತವಾದ ಸಾರಾಂಶವನ್ನು ಕೊಡುತ್ತಾನೆ. ಆತನು ಸಮಾಜಗಳ ಅಂಚಿನೊಳಗಿನ, **ಕಾಡಿನಲ್ಲಿ ವಾಸವಾಗಿದ್ದು** "ಕಾಡುಗತ್ತೆಯಂತೆ" (16:12) **ಬೆಳೆದು** ದೊಡ್ಡವನಾಗುತ್ತಿರುವ ವೇಳೆ **ದೇವರು ಆ ಹುಡುಗನ ಸಂಗಡ ಇದ್ದನು**. ಒಂದು ಅಲೆಮಾರಿ ಜೀವನಶೈಲಿಯನ್ನು ನಡಿಸುವದಕ್ಕೆ ಆರಿಸಿಕೊಂಡವನಾಗಿ, ಇಸ್ಮಾಯೇಲನು ಒಬ್ಬ **ಬಿಲ್ಲುಗಾರನಾದನು**. ಆತನು ಒಬ್ಬ ಬೇಟೆಗಾರನಾಗಿ ದೊಡ್ಡ ಕುಶಲತೆಯನ್ನು ಅಭಿವೃದ್ಧಿ ಪಡಿಸಿಕೊಂಡಿರಬಹುದಾಗಿದೆ, ಅದರಿಂದ ಒಂದು ಪ್ರತಿಕೂಲ ವಾತಾವರಣದಲ್ಲಿ ಬದುಕುಳಿಯಲು ಶಕ್ತನಾಗಿದ್ದನು. ಅನಂತರದ ಕಾಲಗಳಲ್ಲಿ, ಆತನ ಸಂತತಿಯವರೊಳಗೆ ಕೆಲವರಾದ, "ಕೇದಾರಿನವರು" "ಬಿಲ್ಲುಗಾರರು" ಮತ್ತು "ಶೂರರು" ಎಂದು ಚಿತ್ರಿಸಲ್ಪಟ್ಟಿದ್ದಾರೆ (ಯೆಶಾಯ 21:17; ನೋಡಿರಿ ಆದಿಕಾಂಡ 25:12, 13).

**ವಚನ 21.** ಒಂಧು ಕ್ಲುಪ್ತವಾದ ಅಂತಿಮ ವರದಿಯು ಇಸ್ಮಾಯೇಲನು **ಪಾರಾನಿನ ಅರಣ್ಯದಲ್ಲಿ ವಾಸಮಾಡಿದನು** ಎಂದು ಪ್ರಸ್ತಾಪಿಸುತ್ತದೆ, ಇದು ಕಾನಾನಿನ ದಕ್ಷಿಣ ಭಾಗದಿಂದ ಸೀನಾಯಿ ಪರ್ಯಾಯ ದ್ವೀಪದ ಪೂರ್ವ-ಕೇಂದ್ರಿಯ ಬಹಳಷ್ಟು ಭಾಗದ ಮೂಲಕ ಹಾಯ್ದು ಕೆಳಗೆ ಕೆಂಪು ಸಮುದ್ರದ (ಅಕಾಬಾ ಕೊಲ್ಲಿ) ತನಕ ವಿಸ್ತರಿಸಿರುವಂಥ ಅತಿ ದೊಡ್ಡ ಮರುಭೂಮಿಯಾಗಿರುತ್ತದೆ (ಅರಣ್ಯಕಾಂಡ 12:16; 13:3, 26). ಹಾಗರಳು ಒಬ್ಬ ಐಗುಪ್ತಳಾಗಿದ್ದರಿಂದ (16:1, 3; 21:9; 25:12), ಮತ್ತು ಆಕೆ ಹಾಗೂ ಇಸ್ಮಾಯೇಲನು ಅವಳ ಸ್ವದೇಶದ ಸಮೀಪದಲ್ಲಿಯೇ ವಾಸಿಸುತ್ತಿದ್ದ ಕಾರಣದಿಂದ, ಆಕೆಯು ತನ್ನ ಮಗನಿಗೆ **ಐಗುಪ್ತದೇಶದಿಂದ ಕನ್ನಿಕೆಯನ್ನು ತರಿಸಿ ಮದುವೆಮಾಡಿಸಿದಳು**. ಪ್ರಾಚೀನ ಮಧ್ಯಪ್ರಾಚ್ಯದ ಪದ್ಧತಿಯ ಪ್ರಕಾರವಾಗಿ, ಸಾಮಾನ್ಯವಾಗಿ ತಂದೆಯು ತನ್ನ ಮಗನಿಗೆ ಹೆಂಡತಿಯನ್ನು ಹುಡುಕಿ ಮದುವೆ ಮಾಡುತ್ತಿದ್ದನು (24:1–67; 34:4). ಈ ಪ್ರಕರಣದಲ್ಲಿ ಅದು ಸಾಧ್ಯವಿರಲಿಲ್ಲ, ಯಾಕೆಂದರೆ ಅಬ್ರಹಾಮನು ಹಾಗರಳನ್ನು ಹೊರಗೆ ಕಳುಹಿಸಿದ್ದನು. ಆದಕಾರಣ ಆಕೆಯು ಸಾಮಾನ್ಯವಾಗಿ ಗಂಡನಿಗೆ ಇರಬೇಕಾಗಿದ್ದ ಜವಾಬ್ದಾರಿಯನ್ನು ಸ್ವತಃ ತಾನೇ ವಹಿಸಿಕೊಂಡಿದ್ದಳು, ಮತ್ತು ಆಕೆಯು ಬಹುಶಃ ಪಾರಾನಿನ ಕಾಡಿನ ಮೂಲಕವಾಗಿ ಪ್ರಯಾಣಿಸುತ್ತಿರುತ್ತಿದ್ದ ಸಂಚಾರಿ ವರ್ತಕರಿಂದ ಐಗುಪ್ತದ ದಾಸಿಯೊಬ್ಬಳನ್ನು ಸಂಪಾದಿಸಿಕೊಂಡಿರಬಹುದಾಗಿದೆ (ನೋಡಿರಿ 37:28).

## ಅಬೀಮೆಲೆಕನ ಸಂಗಡ ಅಬ್ರಹಾಮನ ಒಪ್ಪಂದ (21:22-34)

ಈ ಹೊಸ ಕಥೆಯಲ್ಲಿ, ಮುಖ್ಯ ಗಮನವು ಪುನಃ ಅಬ್ರಹಾಮನ ಕಡೆಗೆ ಹರಿಸಲ್ಪಡುತ್ತದೆ, ಆತನು ಪುನಃ ಅಬೀಮೆಲೆಕನ ಸಂಗಡ ಮಾತುಕತೆ ನಡಿಸುತ್ತಿರುವವನಾಗಿ ಕಂಡು ಬರುತ್ತಾನೆ.

**ಒಪ್ಪಂದ (21:22-26)**

**[22]ಆ ಕಾಲದಲ್ಲಿ ಅಬೀಮೆಲೆಕನು ತನ್ನ ಸೇನಾಪತಿಯಾದ ಫೀಕೋಲನ ಸಮೇತ ಅಬ್ರಹಾಮನಿಗೆ - ನೀನು ಮಾಡುವ ಎಲ್ಲಾ ಕೆಲಸಗಳಲ್ಲಿಯೂ ದೇವರು ನಿನ್ನ ಸಂಗಡ ಇದ್ದಾನಾದ್ದರಿಂದ [23]ನೀನು ಈ ಸ್ಥಳದಲ್ಲಿ ನನ್ನೊಂದಿಗೆ [ಒಡಂಬಡಿಕೆಮಾಡಿಕೊಂಡು] ನೀನು ನನಗಾಗಲಿ ನನ್ನ ಪುತ್ರಪೌತ್ರರಿಗಾಗಲಿ ಏನೂ ಅನ್ಯಾಯ ಮಾಡದೆ ನಾನು ನಿನಗೆ ಹಿತವನ್ನು ಮಾಡಿದಂತೆಯೇ ನನಗೂ ನೀನು ಇಳುಕೊಂಡಿರುವ ಈ ದೇಶಕ್ಕೂ ಹಿತವನ್ನು ಮಾಡುವದಾಗಿ ದೇವರ ಮೇಲೆ ಪ್ರಮಾಣಮಾಡಬೇಕೆಂದು ಹೇಳಿದನು. [24]ಅದಕ್ಕೆ ಅಬ್ರಹಾಮನು - ಹಾಗೆಯೇ ಪ್ರಮಾಣ ಮಾಡುತ್ತೇನೆ ಅಂದನು. [25]ಅಬೀಮೆಲೆಕನ ಆಳುಗಳು ಒಂದು ಬಾವಿಯನ್ನು ಬಲಾತ್ಕಾರದಿಂದ ಸ್ವಾಧೀನಪಡಿಸಿಕೊಂಡದರಿಂದ ಅಬ್ರಹಾಮನು ಅಬೀಮೆಲೆಕನ ಮೇಲೆ ತಪ್ಪು ಹೊರಿಸಲು ಅಬೀಮೆಲೆಕನು - [26]ಈ ಕೆಲಸವನ್ನು ಮಾಡಿದವರು ಯಾರೋ ನಾನರಿಯೆ; ನೀನು ನನಗೆ ತಿಳಿಸಲೂ ಇಲ್ಲ, ಈಗಿನವರೆಗೆ ನಾನು ಈ ಸಂಗತಿಯನ್ನು ಕೇಳಲೂ ಇಲ್ಲ ಅಂದನು.**

**ವಚನ 22.** ವಾಕ್ಯವು ಹೇಳುವ ಪ್ರಕಾರವಾಗಿ, ಈ ಘಟನೆಯು **ಆ** ಕಾಲದಲ್ಲಿ ನಡೆಯಿತು. ಸಹಜವಾಗಿಯೇ ಇಲ್ಲಿ "ಯಾವ ಕಾಲದಲ್ಲಿ?" ಎಂಬ ಪ್ರಶ್ನೆಯು ಉದ್ಭವವಾಗುತ್ತದೆ. ಲೇಖಕನು ಇಲ್ಲಿ ಸಾರಳ ವಿಷಯದಲ್ಲಿ ಅಬೀಮೆಲೆಕನಿಗೆ ಸುಳ್ಳು ಹೇಳಿದ್ದ ನಂತರದಲ್ಲಿನ ತಕ್ಷಣದ ಕಾಲಕ್ಕೆ (20:1–18), ಇಸಾಕನು ಹುಟ್ಟುವದಕ್ಕೆ ಮುಂಚಿನ ಕಾಲಕ್ಕೆ (21:1–3) ಹಿಂದಿರುಗುತ್ತಾನೆ ಎಂಬುದಾಗಿ ಕೆಲವು ಪಂಡಿತರು ಯೋಚಿಸುತ್ತಾರೆ. ಈ ಅಭಿಪ್ರಾಯವು ಸರಿಯಾಗಿರುವ ಸಾಧ್ಯತೆಯಿದೆಯಾದರೂ, "ಆ ಕಾಲದಲ್ಲಿ" ಎಂಬ ಮಾತು ಕಾಲಾನುಕ್ರಮವನ್ನು ಅನುಸರಿಸಿ ನಡೆಯುತ್ತಿರುವ ಕಥನದಲ್ಲಿ ಘಟನೆಗಳು ಎಂದರ್ಥವಾಗಿರುವ ಸಾಧ್ಯತೆಯು ಅಧಿಕವಾಗಿರುತ್ತದೆ. ಸರಳವಾಗಿ ಹೇಳುವದಾದರೆ, ಅಬ್ರಹಾಮ ಮತ್ತು ಅಬೀಮೆಲೆಕನ ನಡುವಿನ ಒಪ್ಪಂದವು ಇಸಾಕನ ಜನನ ಮತ್ತು ಮೊಲೆ ಬಿಡುವಿಕೆ ಹಾಗೂ ಹಾಗರಳು ಮತ್ತು ಇಸ್ಮಾಯೇಲನನ್ನು ಹೊರಕ್ಕೆ ಕಳುಹಿಸಲ್ಪಟ್ಟ ಬಳಿಕ ಸಂಭವಿಸಿತು (21:1–21)

ಈ ಸಂದರ್ಭದಲ್ಲಿ, **ಅಬೀಮೆಲೆಕನು** ತನ್ನ **ಸೇನಾಪತಿಯಾದ ಫೀಕೋಲನ ಸಮೇತ** ಬಂದನು. "ಫೀಕೋಲ" ಎಂಬುದು ಯಾವ ಮೂಲದಿಂದ ಬಂದಿರುವದೆಂಬುದು ಅಸ್ಪಷ್ಟವಾಗಿರುತ್ತದೆ. ಇದನ್ನು ಕೆಲವರು ಹುರಿಯನ್ನ,[11] ಅಂಟೋಲಿಯನ್,[12] ಅಥವಾ ಫಿಲಿಷ್ಟಿಯದಿಂದ ಬಂದದ್ದೆಂದು ಗುರುತಿಸುತ್ತಾರೆ (21:32, 34; 26:1, 26), ಆದರೆ ಈ ಹೆಸರು ಯಾವದೇ ಪ್ರಾಚೀನ ಬರಹಗಳಲ್ಲಿ ಅಥವಾ ಶಿಲಾಲಿಪಿಗಳಲ್ಲಿ ಕಂಡು ಬಂದಿರುವದಿಲ್ಲ. ಹುರಿಯನ್ನರು ಮೆಸಪೋತಾಮ್ಯದ (ಇರಾಕ್) ವಾಯುವ್ಯ ಭಾಗದಿಂದ ಅಂಟೋಲಿಯ (ತುರ್ಕಿ)[13] ತನಕ ವಿಸ್ತರಿಸಿದ್ದರೆಂದು ತಿಳಿದಿತ್ತಾದ್ದರಿಂದ, Gordon J. Wenhamನು "ಫೀಕೋಲ"ನ ಪೂರ್ವಜರು "ಕ್ರೇತದ ಮೂಲಕವಾಗಿ ಆಯೆಗೆನ್ ಅಥವಾ ಅಂಟೋಲಿಯದಿಂದ" ಬಂದಿರಬಹುದು ("ಕಫ್ತೋರ"; ಆಮೋಸ 9:7) ಎಂದು ಊಹಿಸುತ್ತಾನೆ, ಇದು ಫಿಲಿಷ್ಟಿಯರಲ್ಲಿ ಅನೇಕರ ಮೂಲ ನಿವಾಸವಾಗಿರುತ್ತದೆ.[14]

ಅಬೀಮೆಲೆಕ ಮತ್ತು ಫೀಕೋಲರು ಅಬ್ರಹಾಮನಿಗೆ **ನೀನು ಮಾಡುವ ಎಲ್ಲಾ ಕೆಲಸಗಳಲ್ಲಿಯೂ ದೇವರು ನಿನ್ನ ಸಂಗಡ ಇದ್ದಾನೆ** ಎಂದು ಶ್ಲಾಘಿಸಿದರು. ಅವರು ಹಲವಾರು ವರ್ಷಗಳಿಂದಲೂ ಅಬ್ರಹಾಮನ ಹೆಚ್ಚಾಗುತ್ತಲೇ ಇದ್ದ ಐಶ್ವರ್ಯ ಮತ್ತು ಸಮೃದ್ಧಿಯನ್ನು, ವಿಶೇಷವಾಗಿ ಆತನ ಬೃಹತ್ ಹಿಂಡುಗಳನ್ನು ಮತ್ತು ಮಂದೆಗಳನ್ನು ಗಮನಿಸಿದ್ದರು. ಅಂತಹ ಬೃಹತ್ ಸಂಖ್ಯೆಯಲ್ಲಿರುವ ಪಶುಗಳನ್ನು ನೋಡಿಕೊಳ್ಳಲು ದನಕಾಯುವವರ ಮತ್ತು ಕುರುಬರ

ಅಗತ್ಯವಿದ್ದು ಅವರೆಲ್ಲರೂ ಅವುಗಳನ್ನು ಕಾಪಾಡುವದಕ್ಕಾಗಿ ತರಬೇತಿಗೊಳಿಸಲ್ಪಟ್ಟಿದ್ದರು. ಕಾಲು ಭಾಗಕ್ಕೂ ಅಧಿಕ ಶತಮಾನದ ಹಿಂದೆ, 318 ಮಂದಿ ಅಬ್ರಹಾಮನ ಸೇವೆಯಲ್ಲಿ ಯುದ್ಧವನ್ನು ಮಾಡಿದ್ದರು (14:14) ಮತ್ತು ಆತನ ಬಳಿಯಲ್ಲಿ ಈ ಹೊತ್ತಿಗೆ ಅದಕ್ಕಿಂತ ಎರಡಷ್ಟು ದಾಸರು ಇದ್ದಿರಬಹುದಾಗಿದೆ. ಅಬೀಮೆಲೆಕ ಮತ್ತು ಫೀಕೋಲರು ಅಬ್ರಹಾಮನ ಬಳಿಯಲ್ಲಿದ್ದ ಬೃಹತ್ ಸೇವಕವರ್ಗವನ್ನು ತಮಗೆ ಮುಂದೆ ಎದುರಾಗಬಹುದಾದ ಒಂದು ಗಂಡಾಂತರ ಎಂದು ಕಂಡಿರಬಹುದಾಗಿದೆ.

ಆದದರಿಂದ, ಫಿಲಿಷ್ಟಿಯರು ಸ್ವತಃ ಮಾತುಕತೆಗೆ ಮುಂದಾದರು. ಅವರು ಅಬ್ರಹಾಮನ ಸಂಗಡ "ದೇವರು" (אֱלֹהִים, *ಎಲೋಹಿಮ್*), ಮತ್ತು ಆತನು ಮಾಡುವದೆಲ್ಲವನ್ನೂ ಆಶೀರ್ವದಿಸುತ್ತಿದ್ದಾನೆ ಎಂಬುದನ್ನು ಒಪ್ಪಿಕೊಳ್ಳುವಂಥ ದೊಡ್ಡ ಪ್ರಶಂಸೆಯ ನುಡಿಯೊಂದಿಗೆ ತಮ್ಮ ಸಂಭಾಷಣೆಯನ್ನು ಆರಂಭಿಸಿದರು. *ಎಲೋಹಿಮ್* ಎಂಬುದು ದೇವರಿಗೆ ಬಳಸುವ ಸಾಮಾನ್ಯವಾದ ಪದವಾಗಿದೆ ಮತ್ತು ಆದಿಕಾಂಡ ಪುಸ್ತಕದಲ್ಲಿ ಪರದೇಶದವರು ಆತನಿಗೆ ಬಳಸಿದ ರೂಢಿಯಾದ ಪದವಾಗಿದೆ, ಯಾಕೆಂದರೆ ಅದನ್ನು ಯಾವದೇ ದೇವರಿಗಾದರೂ ಅನ್ವಯಿಸಬಹುದಾಗಿತ್ತು (31:30; 41:38). ಅಬ್ರಹಾಮನ ಮನುಷ್ಯರು ಮತ್ತು ತನ್ನವರ ನಡುವೆ ಸಂಭವಿಸಬಹುದಾದ ಘರ್ಷಣೆ ಅಥವಾ ಹಗೆತನವನ್ನು ತಡೆಗಟ್ಟುವದಕ್ಕಾಗಿ, ಅಬೀಮೆಲೆಕನು, ಈ ಶ್ರೀಮಂತ ಮತ್ತು ಶಕ್ತಿಶಾಲಿಯಾದ ಪರದೇಶಿಯ ಒಂದು ಒಪ್ಪಂದವನ್ನು, ಸಂಗಡ ಒಂದು ಆಕ್ರಮಣ ಮಾಡದಿರುವ ಒಡಂಬಡಿಕೆಯನ್ನು ಮಾಡಿಕೊಳ್ಳಲು ಅಪೇಕ್ಷಿಸಿದನು.

ಈ ಇಬ್ಬರು ವ್ಯಕ್ತಿಗಳ ನಡುವಿನ ಸಭೆಯು ಅವರು ಮೊದಲ ಬಾರಿಗೆ ಭೇಟಿಯಾಗಿ ಹಲವಾರು ವರ್ಷಗಳಾದ ನಂತರ (20:1-18) ಸಂಭವಿಸಿರಬಹುದಾಗಿದೆ ಯಾಕೆಂದರೆ ಅವರ ನಡುವಿನ ಪರಿಸ್ಥಿತಿಯು ಒಂದು ವಿಧದಲ್ಲಿ ಹಿಮ್ಮೋಗವಾಗಿರುತ್ತದೆ. ಮೂಲತಃ, ಅಬ್ರಹಾಮನು ಅಬೀಮೆಲೆಕನ ಸಮ್ಮುಖದಲ್ಲಿ ತನ್ನ ಪ್ರಾಣಕ್ಕೆ ಅಪಾಯವಿದೆ ಎಂದು ಹೆದರಿದ್ದನು. ಆ ಕಾರಣದಿಂದಲೇ ಅಬ್ರಹಾಮನು ಸಾರಳ ಕುರಿತು ಸುಳ್ಳು ಹೇಳಿ ಆಕೆಯನ್ನು ಹೆಂಡತಿಯಾಗಿ ಅರಸನಿಗೆ ಕೊಡುವಂತೆ ನಡಿಸಲ್ಪಟ್ಟಿದ್ದನು. ಹೇಗೂ, ಈಗ ಪರಿಸ್ಥಿತಿಗಳು ವ್ಯತ್ಯಾಸವಾಗಿರುವಂತೆ ಕಾಣಿಸುತ್ತವೆ. ದೇವರ ಆಶೀರ್ವಾದವು ಮೂಲಪಿತೃವಿನ ಸ್ವತ್ತುಗಳನ್ನು ಮತ್ತು ಆತನಿಗೋಸ್ಕರ ಹೋರಾಡುವ ದಾಸರ ಸಂಖ್ಯೆಯನ್ನು ಹೆಚ್ಚಿಸಿದ್ದವು (21:22), ಮತ್ತು ಅರಸನು ತನ್ನ ದೇಶದಲ್ಲಿದ್ದ ಈ ಅಪರಿಚಿತನ ವಿಷಯದಲ್ಲಿ ಹೆದರಿದ್ದನೆಂದು ಕಾಣಿಸುತ್ತದೆ.

**ವಚನ 23.** ಆದದರಿಂದ, ಅಬೀಮೆಲೆಕನು ಅಬ್ರಹಾಮನ ಸಂಗಡ ಮೈತ್ರಿಯನ್ನು ಅಪೇಕ್ಷಿಸುವವನಾಗಿ ತನ್ನ ಸೇನಾಪತಿಯ ಸಂಗಡ ಬಂದಿದ್ದನು. ಆತನು ಮೂಲಪಿತೃವಿಗೆ **ನನಗಾಗಲಿ ನನ್ನ ಪುತ್ರಪೌತ್ರರಿಗಾಗಲಿ ಏನೂ ಅನ್ಯಾಯ ಮಾಡದೆ** ಇರುವೆನೆಂದು **ದೇವರ ಮೇಲೆ ಪ್ರಮಾಣಮಾಡಬೇಕೆಂದು** ಹೇಳಿದನು. ಸರಳವಾಗಿ ಹೇಳುವದಾದರೆ, ಅರಸನು ಅಬ್ರಹಾಮನ ಸಂಗಡ ಒಂದು ಒಪ್ಪಂದವನ್ನು ಮಾಡಿಕೊಳ್ಳಲು ಬಯಸಿದ್ದನು, ಅದರಲ್ಲಿ ಅಬ್ರಹಾಮನು ಇವನ ಪ್ರಜೆಗಳ ಮೇಲೆ ದಾಳಿ ಮಾಡುವದಿಲ್ಲ ಅಥವಾ ರಾಜ್ಯವನ್ನಾಗಲಿ ಅಥವಾ ಭವಿಷ್ಯದಲ್ಲಿನ ರಾಜವಂಶವನ್ನಾಗಲಿ ಪದಚ್ಯುತಗೊಳಿಸುವದಿಲ್ಲ ಎಂಬುದಾಗಿ ದೇವರ ಮುಂದೆ ಶಾಸ್ತ್ರೋಕ್ತವಾಗಿ ಪ್ರಮಾಣ ಮಾಡುವವನಾಗಿದ್ದನು. ಅಬ್ರಹಾಮನು ಇವನ **ದೇಶದಲ್ಲಿ ಇಳುಕೊಂಡಿರುವ** (גּוּר, *ಗುರ್*, "ಒಬ್ಬ ಪರದೇಶದವನಾಗಿ ವಾಸಿಸಿದ") ವೇಳೆ ಯಾವ **ಹಿತವನ್ನು** (חֶסֶד, *ಚೇಸೆಡ್*, "ನಿಷ್ಠೆ" ಅಥವಾ "ಸ್ಥಿರವಾದ ಪ್ರೀತಿ") ಮಾಡಿದನೋ ಅದೇ ಹಿತವನ್ನು ಅಬ್ರಹಾಮನು ಇವನಿಗೆ ತೋರಿಸಬೇಕೆಂದು ಅಬೀಮೆಲೆಕನು ಕೇಳಿಕೊಂಡನು.

**ವಚನ 24. ಅಬ್ರಹಾಮನು** ತಕ್ಷಣವೇ **ಹಾಗೆಯೇ ಪ್ರಮಾಣ ಮಾಡುತ್ತೇನೆ** ಎಂದನು.

ನಾವು ಅಬ್ರಹಾಮನು ಪ್ರಮಾಣ ಮಾಡಿದ್ದರ ಬಗ್ಗೆ ಮಾತ್ರವೇ ಓದುತ್ತೇವಾದರೂ, ಆಕ್ರಮಣ ಮಾಡದಿರುವ ಒಡಂಬಡಿಕೆಯು ಕಾನೂನಾತ್ಮಕವಾಗಿ ಊರ್ಜಿತಗೊಳ್ಳಬೇಕಾದರೆ ಇಬ್ಬರು ವ್ಯಕ್ತಿಗಳೂ ಪ್ರಮಾಣ ಮಾಡತಕ್ಕದ್ದೆಂದು ನಾವು ಬಲ್ಲೆವು. ಆದದರಿಂದ, ಈ ಧಾರ್ಮಿಕ ವಿಧಿಯ ಮುಕ್ತಾಯದ ವೇಳೆಯಲ್ಲಿ, ಕಥಾನಿರೂಪಕನು ಅದನ್ನು ನಂಬಿಗಸ್ತರಾಗಿ ಕೈಕೊಂಡು ನಡೆಯುತ್ತೇವೆಂದು "ಅವರಿಬ್ಬರು ಅಲ್ಲಿ ಪ್ರಮಾಣಮಾಡಿದರು" (21:31) ಎಂಬ ಹೇಳಿಕೆಯನ್ನು ಸೇರ್ಪಡೆಗೊಳಿಸುತ್ತಾನೆ. ಬಹುಶಃ, ಒಡಂಬಡಿಕೆಯನ್ನು ಅಪೇಕ್ಷಿಸಿ ಬಂದವನು ಅದಕ್ಕೆ ನಿಷ್ಠೆಯಿಂದಿರುತ್ತೇನೆಂದು ಪ್ರಮಾಣ ಮಾಡುವವನು ಎಂದು ಊಹಿಸಿಕೊಳ್ಳಲಾಗುತ್ತದೆಂಬ ಕಾರಣದಿಂದ ಈ ಮುಂಚೆ ಅದನ್ನು ಉಲ್ಲೇಖಿಸಲಿಲ್ಲವೆಂದು ತೋರುತ್ತದೆ. ಅಬ್ರಹಾಮನು ಅಬೀಮೆಲೆಕನಿಗೆ ಅಂತಹ ಸಮರ್ಪಣೆಯನ್ನು ಮಾಡಿಕೊಳ್ಳುತ್ತಾನೋ ಅಥವಾ ಇಲ್ಲವೋ ಎಂಬ ಪ್ರಶ್ನೆ ಮಾತ್ರವೇ ಅಲ್ಲಿರುವದಾಗಿತ್ತು. ಆತನು ಹಾಗೆ ಮಾಡುತ್ತೇನೆಂದು ಒಪ್ಪಿದ ತಕ್ಷಣವೇ, ಧಾರ್ಮಿಕ ವಿಧಿಯ ಉಳಿದ ಪ್ರಕ್ರಿಯೆಯು ಮುಂದುವರೆಯುವದಾಗಿದೆ.

**ವಚನ 25.** ಇಬ್ಬರು ಈ ಒಡಂಬಡಿಕೆಯನ್ನು ಊರ್ಜಿತಗೊಳಿಸುವದಕ್ಕೆ ಮುಂಚೆ, **ಅಬ್ರಹಾಮನು** ಪರಿಹಾರ ಕಂಡುಕೊಳ್ಳಬೇಕಾದ ಅಗತ್ಯವಿರುವಂಥ ಸಮಸ್ಯೆಯೊಂದನ್ನು ಪ್ರಸ್ತಾಪಿಸುತ್ತಾನೆ. ಆತನು ತನ್ನ ಆಳುಗಳು ಬಾವಿಯನ್ನು ಅಗೆದಿದ್ದಾಗ **ಅಬೀಮೆಲೆಕನ ಆಳುಗಳು ಒಂದು ಬಾವಿಯನ್ನು ಬಲಾತ್ಕಾರದಿಂದ ಸ್ವಾಧೀನಪಡಿಸಿಕೊಂಡ**ರೆಂದು **ಅಬ್ರಹಾಮನು ಅಬೀಮೆಲೆಕನ ಮೇಲೆ ತಪ್ಪು ಹೊರಿಸಿದನು**. ಇದು ಮೂಲಪಿತೃವಿಗೆ ಒಂದು ಪ್ರಾಮುಖ್ಯವಾದ ಪರೀಕ್ಷಾ ಪ್ರಕರಣವಾಗಿತ್ತು. ಅರಸನಿಗೆ ಮತ್ತು ಅವನ ಜನರಿಗೆ "ಹಿತವನ್ನು" *(ಚೆಸೆಡ್)* ಮಾಡುವೆನೆಂದು ಈಗಾಗಲೇ ಪ್ರಮಾಣ ಮಾಡಿದವನಾಗಿದ್ದದರಿಂದ (21:23, 24), ಅಬೀಮೆಲೆಕನ ಆಳುಗಳ ಅಪರಾಧಕೃತ್ಯಕ್ಕೆ ದಂಡನೆ ಮಾಡಬೇಕೆಂದರೆ ಆತನು ಈ ಪ್ರಮಾಣವನ್ನು ಉಲ್ಲಂಘಿಸಬೇಕಾಗಿರುತ್ತಿತ್ತು. ಆದದರಿಂದ, ಈ ವಿಷಯದಲ್ಲಿ ನ್ಯಾಯವನ್ನು ಒದಗಿಸಬೇಕೆಂದು ಅರಸನಿಗೆ ಮನವಿ ಮಾಡುವದೊಂದೇ ಅಬ್ರಹಾಮನ ಬಳಿಯಲ್ಲಿದ್ದ ಬೇರೆ ಉಪಾಯವಾಗಿತ್ತು.

**ವಚನ 26.** ಬಾವಿಯನ್ನು ಕದ್ದುಕೊಂಡಿರುವ ಕುರಿತಾದ ಮೂಲಪಿತೃವಿನ ದೂರು ಇಂದು ನಮ್ಮಲ್ಲಿ ಕೆಲವರಿಗೆ ಒಂದು ಗಂಭೀರವಾದ ಅಪರಾಧವೆಂಬಂತೆ ತೋರದೆ ಇರಬಹುದಾದರೂ, ಅಷ್ಟಾಗಿ ಮಳೆಯಾದಂಥ ದೇಶದಲ್ಲಿ ಜನರು ಮತ್ತು ಪ್ರಾಣಿಗಳಿಗೆ ಅದೊಂದು ಜೀವನ್ಮರಣಗಳ ವಿಷಯವಾಗಿತ್ತು. ಅಬ್ರಹಾಮನಿಗೆ **ಅಬೀಮೆಲೆಕ**ನ ದೇಶದ ನೀರನ್ನು ಬಳಸುವ ಹಕ್ಕು ಇಲ್ಲವಾದಲ್ಲಿ, ಅಂಥ ದೇಶದಲ್ಲಿ ಅಬ್ರಹಾಮನು ಅವನೊಂದಿಗೆ ಸಮಾಧಾನದಿಂದ ಜೀವಿಸಬಹುದು ಎಂಬ ವಾಗ್ದಾನಕ್ಕೆ ಯಾವ ಬೆಲೆ ಇತ್ತು?

ಈ ಸಮಸ್ಯೆಯು ಹೊಸದಾಗಿ ಮಾಡಿಕೊಳ್ಳಲ್ಪಟ್ಟ ಒಪ್ಪಂದಕ್ಕೆ ಒಂದು ಉತ್ತಮ ಪರೀಕ್ಷೆಯಾಗಿತ್ತು. ಅರಸನು ತನ್ನ ವಿಷಯದಲ್ಲಿ ನ್ಯಾಯವಾಗಿ ನಡೆದುಕೊಳ್ಳವನೋ ಮತ್ತು ಆತನ ಕೆಲವು ಸೇವಕರಿಂದ ನಡಿಸಲ್ಪಟ್ಟ ತಪ್ಪನ್ನು ಸರಿಪಡಿಸುವನೋ ಎಂಬುದನ್ನು ಅಬ್ರಹಾಮನು ತಿಳಿದುಕೊಳ್ಳಲು ಬಯಸಿದ್ದನು. ಅಂತೂ, ಆತನನ್ನು, ಮತ್ತು ಆತನ ಜೊತೆಯಲ್ಲಿರುವ ಎಲ್ಲರನ್ನು ಆ ಪ್ರಾಂತ್ಯದಲ್ಲಿ ಬಂದು ಜೀವಿಸಬೇಕೆಂದು ಅಬೀಮೆಲೆಕನು ಆಮಂತ್ರಿಸಿದ್ದನಷ್ಟೆ (20:15). ಇದು ಸ್ವಾಭಾವಿಕವಾಗಿಯೇ ಅವರ ಜೀವನೋಪಾಯಕ್ಕಾಗಿ ಆ ದೇಶ ಮತ್ತು ಅದರ ಜಲವನ್ನು ಬಳಸುವದರ ಕುರಿತಾಗಿತ್ತೆಂದು ಸೂಚ್ಯಾರ್ಥವಾಗಿದೆ. ಅರಸನು **ಈ ಕೆಲಸವನ್ನು ಮಾಡಿದವರು ಯಾರೋ** ತನಗೆ ಸಂಪೂರ್ಣ ಗೊತ್ತೇ ಇಲ್ಲ ಎಂದು ಹೇಳಿದನು. ಬಳಿಕ ಅಬ್ರಹಾಮನು ಅದನ್ನು ತಿಳಿಸಲು ಉದಾಸೀನ ಮಾಡಿದನೆಂಬುದಾಗಿ ಸ್ವಲ್ಪ ತಪ್ಪನ್ನು

ಅವನ ಮೇಲೆ ಹೊರಿಸಿದನು. ಅಬೀಮೆಲೆಕನು **ಈಗಿನವರೆಗೆ ನಾನು ಈ ಸಂಗತಿಯನ್ನು ಕೇಳಲೂ ಇಲ್ಲ** ಎಂದು ಹೇಳಿದನು.

## ಒಪ್ಪಂದವು ಊರ್ಜಿತಗೊಳಿಸಲ್ಪಟ್ಟಿದ್ದು (21:27-34)

**[27]ಆಗ ಅಬ್ರಹಾಮನು ಅಬೀಮೆಲೆಕನಿಗೆ ಕುರಿದನಗಳನ್ನು ದಾನಮಾಡಿದನು. ಹೀಗೆ ಅವರಿಬ್ಬರೂ ಒಡಂಬಡಿಕೆಮಾಡಿಕೊಂಡರು. [28]ತರುವಾಯ ಅಬ್ರಹಾಮನು ಹಿಂಡಿನ ಏಳು ಕುರಿಗಳನ್ನು ಪ್ರತ್ಯೇಕವಾಗಿ ಇರಿಸಲು ಅಬೀಮೆಲೆಕನು ಅವನನ್ನು [29]ನೀನು ಪ್ರತ್ಯೇಕವಾಗಿ ಇರಿಸಿರುವ ಈ ಏಳು ಕುರಿಗಳು ಯಾತಕ್ಕೆ ಎಂದು ಕೇಳಿದನು. ಅದಕ್ಕೆ ಅಬ್ರಹಾಮನು [30]ಈ ಬಾವಿಯನ್ನು ತೋಡಿಸಿದವನು ನಾನೇ ಎಂಬದಕ್ಕೆ ಸಾಕ್ಷಿಯಾಗಿ ನೀನು ಈ ಏಳು ಕುರಿಗಳನ್ನು ನನ್ನ ಕೈಯಿಂದ ತೆಗೆದುಕೊಳ್ಳಬೇಕು ಅಂದನು. [31]ಅವರಿಬ್ಬರು ಅಲ್ಲಿ ಪ್ರಮಾಣಮಾಡಿದ್ದರಿಂದ ಆ ಸ್ಥಳಕ್ಕೆ ಬೇರ್ಷೆಬ ಎಂದು ಹೆಸರಾಯಿತು. [32]ಬೇರ್ಷೆಬದಲ್ಲಿ ಅವರು ಒಡಂಬಡಿಕೆಯನ್ನು ಮಾಡಿಕೊಂಡರು. ತರುವಾಯ ಅಬೀಮೆಲೆಕನೂ ಅವನ ಸೇನಾಪತಿಯಾದ ಫೀಕೋಲನೂ ಫಿಲಿಷ್ಟಿಯರ ದೇಶಕ್ಕೆ ತಿರಿಗಿ ಹೊರಟು ಹೋದರು. [33]ಅಬ್ರಹಾಮನು ಬೇರ್ಷೆಬದಲ್ಲಿ ಪಿಚುಲವೃಕ್ಷವನ್ನು ನೆಟ್ಟು ನಿತ್ಯದೇವರಾದ ಯೆಹೋವನ ಹೆಸರನ್ನು ಹೇಳಿಕೊಂಡು ಆರಾಧಿಸಿದನು. [34]ಅಬ್ರಹಾಮನು ಫಿಲಿಷ್ಟಿಯರ ದೇಶದಲ್ಲಿ ಬಹುದಿವಸ ಇಳುಕೊಂಡಿದ್ದನು.**

**ವಚನ 27.** ಅಬೀಮೆಲೆಕನು ತನ್ನ ಸೇವಕರು ಅವನ ಬಾವಿಯನ್ನು ವಶಪಡಿಸಿಕೊಂಡಿರುವುದು ಗೊತ್ತಿಲ್ಲ ಎಂದು ಹೇಳಿದಾಗ **ಅಬ್ರಹಾಮನು** ಅವನನ್ನು ನಂಬಿದನೆಂದು ತೋರುತ್ತದೆ. ಈ ವಿವಾದದ ಫಲಿತಾಂಶವು ಏನಾಯಿತೆಂಬುದನ್ನು ವಾಕ್ಯವು ದಾಖಲಿಸುವದಿಲ್ಲವಾದರೂ, ಬಹುಶಃ ಅರಸನು ಮೂಲಪಿತೃವಿನ ಹೇಳಿಕೆಯ ಬಗ್ಗೆ ವಿಚಾರಣೆ ನಡಿಸುವದಾಗಿ ಒಪ್ಪಿಕೊಂಡಿರಬಹುದಾಗಿದೆ. ತನಗಾಗಿರುವ ಅನ್ಯಾಯವನ್ನು ಸರಿಪಡಿಸುವದಾಗಿ ಒಂದಿಷ್ಟು ಭರವಸವನ್ನು ಅರಸನು ಕೊಡುವ ಹೊರತು ಅಬ್ರಹಾಮನು ಆಕ್ರಮಣ ಮಾಡದಿರುವ ಒಪ್ಪಂದವನ್ನು ಊರ್ಜಿತಗೊಳಿಸಿರುತ್ತಿರಲಿಲ್ಲ ಎಂದು ಕಾಣುತ್ತದೆ. ವಿವಾದವನ್ನು ಶಾಂತಯುತವಾಗಿ ಪರಿಹರಿಸಿದ್ದಕ್ಕೆ ಶ್ಲಾಘನೆ ಮಾಡುವವನಾಗಿ, ಮೂಲಪಿತೃವು **ಅಬೀಮೆಲೆಕನಿಗೆ ಕುರಿದನಗಳನ್ನು ದಾನಮಾಡಿದನು**.

ಉತ್ತಮ ಬಾಂಧವ್ಯಗಳನ್ನು ಮರುಸ್ಥಾಪನೆ ಮಾಡಿಕೊಂಡ ಬಳಿಕ, **ಅವರಿಬ್ಬರೂ ಒಡಂಬಡಿಕೆಮಾಡಿಕೊಂಡರು**, ಅದರಲ್ಲಿ ಪರಸ್ಪರ ಹೊಣೆಗಾರಿಕೆಗಳು ಸೇರಿದ್ದವು. "ಒಡಂಬಡಿಕೆಮಾಡಿಕೊಂಡರು" ಎಂಬುದನ್ನು ಅನುವಾದಿಸಿರುವ ಇಬ್ರಿಯ ಮಾತು (כָּרַת בְּרִית, *ಕಾರಾಥ ಬೆರಿಥ್)* ಅಕ್ಷರಶಃ "ಒಂದು ಒಡಂಬಡಿಕೆಯನ್ನು ಕತ್ತರಿಸು" ಎಂದರ್ಥವನ್ನು ಹೊಂದಿದೆ, ಅದು ಒಂದು ಪ್ರಾಣಿಯನ್ನು ಕಡಿದು ಅದರ ದೇಹದ ಹಲವಾರು ಭಾಗಗಳ ಮೂಲಕವಾಗಿ ಹಾದು ಹೋಗುವಂಥ ಪ್ರಾಚೀನ ಪದ್ಧತಿಯನ್ನು ಸೂಚಿಸುತ್ತಿರಬಹುದಾಗಿದೆ (ನೋಡಿರಿ 15:7-11, 17, 18). ಹಾಗೆ ಮಾಡುವ ವ್ಯಕ್ತಿಗಳು ಒಡಂಬಡಿಕೆಯಲ್ಲಿನ ಎಲ್ಲಾ ಹೊಣೆಗಾರಿಕೆಗಳನ್ನು ಕೈಕೊಂಡು ನಡೆಯದಿರುವ ಎಲ್ಲಾ ಪಾಲುಗಾರರ ಮೇಲೆ "ಪ್ರಾಣಿಗೆ ಆಗಿರುವ ಗತಿಯೇ ಉಂಟಾಗಲಿ"[15] ಎಂಬ ಶಾಪದೊಳಗೆ ತಮ್ಮನ್ನು ಬರಮಾಡಿಕೊಳ್ಳುವರು.

**ವಚನ 28.** ವಾಕ್ಯಭಾಗವು ಹೇಳುವದೇನೆಂದರೆ **ತರುವಾಯ ಅಬ್ರಹಾಮನು ಹಿಂಡಿನ ಏಳು ಕುರಿಗಳನ್ನು ಪ್ರತ್ಯೇಕವಾಗಿ ಇರಿಸಿದನು**. ಇವರಿಬ್ಬರು ಆಗಷ್ಟೇ ಯಜ್ಞಮಾಡಿದ್ದ ಪ್ರಾಣಿಗಳಷ್ಟೆ ಅಲ್ಲದೆ ಹೆಚ್ಚುವರಿಯಾಗಿ ಏಳು ಪ್ರಾಣಿಗಳನ್ನು ಆರಿಸಿಕೊಂಡರೆಂದು ಕಾಣಿಸುತ್ತದೆ.

ಈ ಕ್ರಿಯೆಯು ಪದ್ಧತಿಯಾಗಿ ಮಾಡಲ್ಪಡುತ್ತಿದ್ದಕ್ಕಿಂತಲೂ ಹೆಚ್ಚಿನದ್ದಾಗಿರಬಹುದು, ಯಾಕೆಂದರೆ ಸ್ವತಃ ಅಬೀಮೆಲೆಕನು ಇದರ ಅರ್ಥವೇನೆಂದು ಗೊಂದಲಕ್ಕೀಡಾಗಿದ್ದನು.

**ವಚನ 29.** ಹೆಚ್ಚುವರಿ ಕುರಿಗಳ ಮಹತ್ವವೇನೆಂಬುದು ಸ್ವವಿವರಣಾತ್ಮಕವಾಗಿಲ್ಲದ ಕಾರಣ, ಅರಸನು ಅವುಗಳನ್ನು ಸ್ವೀಕರಿಸಿಕೊಳ್ಳಲು ಸಂಕೋಚ ಪಟ್ಟನು. ಆತನು ಸ್ಪಷ್ಟತೆಯನ್ನು ನೀಡಬೇಕೆಂದು ಕೇಳುತ್ತಾ ಹೀಗೆ ಹೇಳಿದನು, **ನೀನು ಪ್ರತ್ಯೇಕವಾಗಿ ಇರಿಸಿರುವ ಈ ಏಳು ಕುರಿಗಳು ಯಾತಕ್ಕೆ**.

**ವಚನ 30.** ಅಬ್ರಹಾಮನು ತನ್ನ ಉದ್ದೇಶಗಳು ಮತ್ತು ಕೃತ್ಯಗಳು ಎರಡನ್ನೂ ಅರಸನಿಗೆ ವಿವರಿಸಿದನು: **ಈ ಬಾವಿಯನ್ನು ತೋಡಿಸಿದವನು ನಾನೇ ಎಂಬದಕ್ಕೆ ಸಾಕ್ಷಿಯಾಗಿ ನೀನು ಈ ಏಳು ಕುರಿಗಳನ್ನು ನನ್ನ ಕೈಯಿಂದ ತೆಗೆದುಕೊಳ್ಳಬೇಕು.** ಅಬೀಮೆಲೆಕನು ಈ ಬಾವಿಯ ಮೇಲೆ ಯಾರಿಗೆ ಹಕ್ಕು ಇರುತ್ತದೆಂಬುದನ್ನು ನಿರ್ಧರಿಸುವವನು ಎಂಬುದರ ಬಗ್ಗೆ ಆಕ್ರಮಣ ಮಾಡದಿರುವ ಒಪ್ಪಂದ ಅಥವಾ ಮೌಖಿಕ ವಾಗ್ದಾನಕ್ಕಿಂತಲೂ ಅಧಿಕವಾದ ಭದ್ರತೆಯನ್ನು ಮೂಲಪಿತೃವು ಬಯಸಿದ್ದನು; ಬಾವಿಯನ್ನು ತನ್ನ ಜನರು ಅಗೆದಿದ್ದರಾದ್ದರಿಂದ ಅದು ಈತನಿಗೆ ಸೇರಿದ್ದು ಎಂಬುದಾಗಿ ಅರಸನು ಸಾರ್ವಜನಿಕರ ಮುಂದೆ ಪ್ರಮಾಣವೊಂದನ್ನು ಮಾಡಬೇಕೆಂಬುದು ಈತನ ಬಯಕೆಯಾಗಿತ್ತು.

**ವಚನ 31.** ಮೂಲಪಿತೃವು ಎರಡನೆಯ ಸಾರಿ ಅಬೀಮೆಲೆಕನನ್ನು ಎದುರುಗೊಂಡದ್ದರ ಕುರಿತಾದ ಈ ಕಥನವು **ಅವರಿಬ್ಬರು ಅಲ್ಲಿ ಪ್ರಮಾಣಮಾಡಿದ್ದರಿಂದ ಆ ಸ್ಥಳಕ್ಕೆ ಬೇರ್ಷೆಬ ಎಂದು ಹೆಸರಾಯಿತು** ಎಂಬ ಹೇಳಿಕೆಯೊಂದಿಗೆ ಮುಕ್ತಾಯಗೊಳ್ಳುತ್ತದೆ. "ಬಾವಿ"ಯ ಜೊತೆಗೆ (21:25, 30), "ಪ್ರಮಾಣಮಾಡುವಿಕೆ," "ಏಳು," ಮತ್ತು "ಪ್ರಮಾಣ" ಎಂಬ ಮಾತುಗಳು ಈ ವಿಭಾಗದಲ್ಲಿ ಪದೇ ಪದೇ ಪ್ರಸ್ತಾಪಿಸಲ್ಪಟ್ಟಿರುತ್ತವೆ (21:23, 24, 28, 29, 30). ಲೇಖಕನು ಇಲ್ಲಿ ಬಳಸಲಾಗಿರುವ ಪದಗಳ ಮಹತ್ವವನ್ನು ವಿವರಿಸಿದನು. "ಬೇರ್ಷೆಬ" ಎಂಬ ಹೆಸರಿನಲ್ಲಿ ಎರಡು ಇಬ್ರಿಯ ಪದಗಳಿರುತ್ತವೆ: בְּאֵר *(ಬೇರ್)*, ಅಂದರೆ "ಬಾವಿ," ಮತ್ತು שֶׁבַע (*ಶೆಬಾ*), ಇದು "ಏಳು" ಎಂಬ ಸೂಚ್ಯಾರ್ಥವನ್ನು ಹೊಂದಿದೆ. ಎರಡು ಪದಗಳನ್ನು ಒಂದಾಗಿ ಸೇರಿಸುವಾಗ, ಅವುಗಳ ಅಕ್ಷರಶಃ ಅರ್ಥವು "ಏಳರ ಬಾವಿ" ಎಂದಾಗುತ್ತದೆ, ಅದು ಅಬ್ರಹಾಮನು ಅರಸನಿಗೆ ನೀಡಿದ ಏಳು ಕುರಿಗಳನ್ನು ಸೂಚಿಸುತ್ತದೆ. ಆ ಹೆಸರಿನ ಅರ್ಥವು "ಪ್ರಮಾಣದ ಬಾವಿ" ಎಂಬ ಅರ್ಥವನ್ನು ಸಹ ಸೂಚಿಸಬಹುದು, ಇವರಿಬ್ಬರು ಪ್ರಮಾಣವನ್ನು ಮಾಡಿಕೊಂಡ ಸ್ಥಳದ ಸ್ಮರಣೆ ಆಗಿರಬಲ್ಲದು.[16]

ಕಾನಾನಿನಲ್ಲಿ ಇಪ್ಪತ್ತೈದಕ್ಕೂ ಅಧಿಕ ವರ್ಷಗಳ ಕಾಲ ಜೀವಿಸಿದ ಬಳಿಕ, ಅಬ್ರಹಾಮನು ಅಂತಿಮವಾಗಿ ಕನಿಷ್ಠ ಒಂದು ಬಾವಿಯ ಮೇಲೆ ಹಕ್ಕನ್ನು ಸಾಧಿಸಿಕೊಂಡಿದ್ದನು. ಅಬ್ರಹಾಮನು ಬಾವಿ ವಾಸ್ತವಿಕವಾಗಿ ಯಾವ ಸ್ಥಳದಲ್ಲಿದೆ ಎಂಬುದು ವಿವಾದಾತ್ಮಕವಾಗಿರುತ್ತದೆ, ಯಾಕೆಂದರೆ ಬಾವಿಗಳ ಕಾಲವನ್ನು ನಿರ್ಧರಿಸುವದು ಕಷ್ಟಕರ ಮತ್ತು ಆ ಸ್ಥಳದಿಂದ ಎರಡು ಮೈಲಿಗಳಷ್ಟು ದೂರದೊಳಗೆ ಕಂಡು ಹಿಡಿಯಲ್ಪಟ್ಟಿರುವ ಹಲವಾರು ಬಾವಿಗಳಿಗೆ ಆಧುನಿಕ ಟೆಲ್ ಬೇರ್ಷೆಬ ಎಂಬ ಹೆಸರಿರುತ್ತದೆ. ಅಷ್ಟುಮಾತ್ರವಲ್ಲದೆ, ಟೆಲ್ ಬೇರ್ಷೆಬ ಎಂಬುದು ಮೂಲಪಿತೃವಿನ ಬೇರ್ಷೆಬ ಎಂಬ ಅದೇ ಸ್ಥಳವೋ ಅಥವಾ ಅಲ್ಲವೋ ಎಂಬುದು ಯಾರಿಗೂ ಗೊತ್ತಿರುವದಿಲ್ಲ.[17] ಜನರು ಕೆಲವು ಸಾರಿ ಭೂಕಂಪ, ಯುದ್ಧಗಳಿಂದಾದ ನಾಶನ, ತೊರೆಗಳು ಅಥವಾ ಬಾವಿಗಳು ಒಣಗಿ ಹೋದ ಕಾರಣದಿಂದ, ಮತ್ತು ಇನ್ನಿತರ ಕಾರಣಗಳಿಗಾಗಿ ಪ್ರಾಚೀನ ಸ್ಥಳಗಳನ್ನು ತ್ಯಜಿಸಿದ್ದಾರೆ. ಬೇರೆ ಸ್ಥಳಕ್ಕೆ ವಲಸೆ ಹೋದ ಜನರು ಕೆಲವು ಸಾರಿ ತಮ್ಮ ಹೊಸ ಸ್ಥಳಕ್ಕೆ ತಾವು ಮೊದಲಿದ್ದ ಮೂಲ ಪಟ್ಟಣದ ಹೆಸರನ್ನೇ ಇಡುತ್ತಿದ್ದರು. ಉತ್ಖನನ ಶಾಸ್ತ್ರಜ್ಞರು ಪ್ರಾಚೀನ

ಜಗತ್ತಿನಲ್ಲಿನ ಅಂಥಹ ಹಲವಾರು “ಸ್ಥಳ ಬದಲಾವಣೆಗಳ” ಪುರಾವೆಗಳನ್ನು ಕಂಡುಕೊಂಡಿರುತ್ತಾರೆ.

**ವಚನ 32.** ಅಬ್ರಹಾಮನ ಸಂಗಡ ಯಶಸ್ವಿಯಾಗಿ **ಬೇರ್ಷೆಬದಲ್ಲಿ ಅವರು ಒಡಂಬಡಿಕೆಯನ್ನು ಮಾಡಿಕೊಂಡ** ಬಳಿಕ, **ಅಬೀಮೆಲೆಕನೂ ಫೀಕೋಲನೂ ಫಿಲಿಷ್ಟಿಯರ ದೇಶಕ್ಕೆ ತಿರಿಗಿ ಹೊರಟು** ಹೋಗಲು ಸಿದ್ಧರಾಗಿದ್ದರು. ಇದು ಬೇರ್ಷೆಬವು ನೇರವಾಗಿ ಫಿಲಿಷ್ಟಿಯರ ನಿಯಂತ್ರಣದಲ್ಲಿರಲಿಲ್ಲ ಎಂಬ ಸೂಚ್ಯಾರ್ಥ ನೀಡುತ್ತದೆ; ಆದರೆ ಅದು ಅವರ ಗಡಿಗೆ ಸಮೀಪದಲ್ಲಿದ್ದು ಅವರು ಅದರ ಮೇಲೆ ಸ್ವಲ್ಪ ಮಟ್ಟಿಗೆ ನಿಯಂತ್ರಣವನ್ನು ಚಲಾಯಿಸುತ್ತಿದ್ದರು ಮತ್ತು ಅಲ್ಲಿ ವಾಸಿಸುತ್ತಿದ್ದ ಶಕ್ತಿಶಾಲಿ ಶೆಕ್ ಆಗಿರುವ ಅಬ್ರಹಾಮನ ಸಂಗಡ ಸಮಾಧಾನದ ಸಂಬಂಧವನ್ನಿಟ್ಟುಕೊಳ್ಳಲು ಬಯಸಿದ್ದರು ಎಂದು ಕಾಣಿಸುತ್ತದೆ.

ಕೆಲವು ಸಂದೇಹವಾದಿಗಳು ಅಬೀಮೆಲೆಕ, ಪೀಕೋಲ, ಮತ್ತು ಗೆರಾರಿನ ಫಿಲಿಷ್ಟಿಯರ ಕಥೆಯ ಕುರಿತು ಸಂಶಯದಿಂದ ಇರುತ್ತಾರೆ. ಅವರು ಫಿಲಿಷ್ಟಿಯ ದೇಶದ ಯಾವದೇ ಉಲ್ಲೇಖವನ್ನು ಕಾಲದ ತಪ್ಪೆಣಿಕೆ ಎಂಬುದಾಗಿ ನೋಡುತ್ತಾರೆ, ಯಾಕೆಂದರೆ ಕ್ರಿ.ಪೂ. 1200ರ ವರೆಗೂ ಅವರು ಕಾನಾನ್ ದೇಶದಲ್ಲಿ ಬಂದಿದ್ದರೆಂಬುದಕ್ಕೆ ಯಾವದೇ ಪುರಾವೆ ಇರುವದಿಲ್ಲ. ಹಾಗಿದ್ದರೂ, ಉತ್ಖನನಶಾಸ್ತ್ರಜ್ಞರು ಕ್ರೇತ್ ದ್ವೀಪ (“ಕಫ್ತೋರ”; ಆಮೋಸ 9:7) ಮತ್ತು ಐಗುಪ್ತ, ಕಾನಾನ್, ಸಿರಿಯ, ಮತ್ತು ಮೆಸಪೊಟೋಮ್ಯಗಳ ನಡುವೆ ವ್ಯಾಪಕವಾದ ವ್ಯಾಪಾರ ವಹಿವಾಟು ಇತ್ತೆಂಬುದಕ್ಕೆ ಪುರಾವೆಯನ್ನು ಕಂಡು ಹಿಡಿದಿರುತ್ತಾರೆ, ಅದರಲ್ಲಿ ಕ್ರೇತ್-ಶೈಲಿಯ ಹಸಿಚಿತ್ರಗಳು, ಕುಂಬಾರಿಕೆ ವಸ್ತುಗಳು, ಮತ್ತು ಮೂಲಪಿತೃಗಳ ಕಾಲದ ಪಾನಪಾತ್ರೆಗಳು ಸೇರಿರುತ್ತವೆ.[18] ವಿಷಯವು ಹೀಗಿರುವಾಗ, ಆದಿಕಾಂಡದಲ್ಲಿನ ಫಿಲಿಷ್ಟಿಯರು ಬೃಹತ್ ಸಂಖ್ಯೆಯಲ್ಲಿ ಕಾನಾನಿನ ಮೇಲೆ ದಾಳಿಮಾಡಿದವರಲ್ಲಿ ಮೊದಲಿಗರು ಮತ್ತು ಅನಂತರದ ಫಿಲಿಷ್ಟಿಯರು ಕಡೆಯ ದಾಳಿಕೋರರು ಏಕೆ ಆಗಿರಲಾರರು ಎಂಬುದಕ್ಕೆ ಯಾವದೇ ಉತ್ತಮ ಕಾರಣವು ಕಂಡು ಬರುವದಿಲ್ಲ.

ಅಷ್ಟುಮಾತ್ರವಲ್ಲದೆ, ಈ ಆರಂಭಿಕ ನಿವಾಸಿಗಳು ಅನಂತರದ ಫಿಲಿಷ್ಟಿಯರಿಗೆ ಹೋಲಿಸಿದರೆ ರಾಜಕೀಯವಾಗಿ ಭಿನ್ನವಾಗಿದ್ದರು. ಯಾರೊಂದಿಗೆ ಅಬ್ರಹಾಮನು ಒಪ್ಪಂದವನ್ನು ಮಾಡಿಕೊಂಡನೋ, ಅವರು ಸಮಾಧಾನಭರಿತರು ಮತ್ತು ಪರದೇಶದವರ ಸಂಗಡ ರಾಜತಾಂತ್ರಿಕ ನೀತಿಯನ್ನು ಅನುಸರಿಸಿದರು; ಅವರು ಗೆರಾರಿನಲ್ಲಿ ವಾಸಿಸುತ್ತಿದ್ದರು ಮತ್ತು ಅವರನ್ನು ಒಬ್ಬ ಅರಸನು ಆಳುತ್ತಿದ್ದನು. ಅದಕ್ಕೆ ತದ್ವಿರುದ್ಧವಾಗಿ, ಅನಂತರದ ಫಿಲಿಷ್ಟಿಯರು ಸಮರನಿರತ ಯುದ್ಧವೀರರಾಗಿದ್ದರು, ಅವರು ಐದು ಪಟ್ಟಣಗಳ - ಗಾಜಾ, ಅಷ್ಡೋದ್, ಅಷ್ಕೆಲೋನ್, ಗತೂರು, ಎಕ್ರೋನ್ - ಒಂದು ಮೈತ್ರಿಯನ್ನು (ಒಂದು ಪಂಚಪಟ್ಟಣ) ಸ್ಥಾಪಿಸಿಕೊಂಡಿದ್ದರು (ಯೆಹೋಶುವ 13:3; ನ್ಯಾಯಸ್ಥಾಪಕ 3:3; 1 ಸಮುವೇಲ 6:16-18).[19] ನ್ಯಾಯಸ್ಥಾಪಕರ ಕಾಲಾವಧಿಯ ಬಹಳಷ್ಟು ಭಾಗ ಮತ್ತು ಸೌಲ ಆಳ್ವಿಕೆಯ ಪೂರ್ತಿಕಾಲ ಇಸ್ರಾಯೇಲ್ಯರು ಫಿಲಿಷ್ಟಿಯರ ಕೈಗಳಲ್ಲಿ ಬಾಧೆಯನ್ನು ಅನುಭವಿಸಿದರು. ದಾವೀದನು ಆಳ್ವಿಕೆಯು ಆರಂಭಗೊಂಡು ಹಲವಾರು ವರ್ಷಗಳಾದ ನಂತರವಷ್ಟೇ ಈತನ ಸೈನ್ಯವು ಅವರನ್ನು ಸ್ವಾಧೀನಪಡಿಸಿಕೊಂಡಿತ್ತು (2 ಸಮುವೇಲ 8:1; 1 ಪೂರ್ವಕಾಲವೃತ್ತಾಂತ 18:1).

**ವಚನ 33.** ಎರಡು ಕಡೆಯವರಿಂದ ಒಡಂಬಡಿಕೆಯು ಅಂಗೀಕೃತಗೊಂಡು ಊರ್ಜಿತಗೊಳಿಸಲ್ಪಟ್ಟಿತ್ತಾದ್ದರಿಂದ, ಅಬೀಮೆಲೆಕ ಮತ್ತು ಫೀಕೋಲರು ಗೆರಾರಿಗೆ ಹಿಂದಿರುಗಿ ಹೋದರು. ಮೂಲಪಿತೃವು ಅಲ್ಲಿಯೇ ಉಳಿದುಕೊಂಡು **ಬೇರ್ಷೆಬದಲ್ಲಿ ಪಿಚುಲವೃಕ್ಷವನ್ನು**

**ನೆಟ್ಟನು**. ಪಿಚುಲ ವೃಕ್ಷಗಳು ನೆಗೆವ್ ಪಟ್ಟಣದ ದಕ್ಷಿಣ ಭಾಗದಲ್ಲಿ ನೆರಳು ನೀಡುವದಕ್ಕೋಸ್ಕರ ಯಾವಾಗಲೂ ಬಹು ಮುಖ್ಯವಾಗಿದ್ದವು, ಮತ್ತು ಅವುಗಳು ಆ ಪ್ರಾಂತ್ಯದಲ್ಲಿನ ಅಷ್ಟಾಗಿ ಮಳೆಯಾಗದ ಹವಾಮಾನಕ್ಕೆ ಅತ್ಯುತ್ತಮವಾಗಿ ಹೊಂದಿಕೊಂಡಿರುತ್ತವೆ. ಮರುಭೂಮಿಯಲ್ಲಿ ವಾಸಿಸುವವರು ಈ ಮರಗಳನ್ನು ಸಾಂಪ್ರದಾಯಿಕವಾಗಿ ನೆಡುತ್ತಲೇ ಬಂದಿರುತ್ತಾರೆ ಯಾಕೆಂದರೆ ಅವುಗಳು ಇಪ್ಪತ್ತರಿಂದ ಮೂವತ್ತು ಅಡಿಗಳಷ್ಟು ಎತ್ತರಕ್ಕೆ ಬೆಳೆಯುತ್ತವೆ ಮತ್ತು ನೆರಳನ್ನು ಒದಗಿಸುತ್ತವೆ. ಅವಗಳು ಕುರುಬರಿಗೆ ಇನ್ನಷ್ಟು ಪ್ರಯೋಜನಕರವಾಗಿವೆ ಯಾಕೆಂದರೆ ಮಂದೆಗಳು ಈ ಮರಗಳ ಮೃದುವಾದ ಕೆಳಗಿರುವ ಕೊಂಬೆಗಳನ್ನು ತಿನ್ನುವದಕ್ಕೆ ಇಷ್ಟಪಡುತ್ತವೆ.[20]

ಹಳೆಯ ಒಡಂಬಡಿಕೆಯಲ್ಲಿ ಮರಗಳು – ವಿಶೇಷವಾಗಿ ಸದಾಹಸಿರಾಗಿರುವ ಮರಗಳು – ಜೀವ, ಫಲಭರಿತತೆ, ಮತ್ತು ದೇವರ ಆಶೀರ್ವಾದಗಳಿಗೆ ಸಂಕೇತವಾಗಿರುತ್ತವೆ (2:9; 13:10; ಕೀರ್ತನೆ 1:3; ಯೆರೆಮೀಯ 17:7, 8; ಯೆಹೆಜ್ಕೇಲ 47:12). ಮೂಲಪಿತೃವು ಪಿಚುಲ ವೃಕ್ಷಗಳನ್ನು ನೆಟ್ಟ ಬಳಿಕ ಆರಾಧನೆಯನ್ನು ಮಾಡಿದ್ದರಿಂದ, ಕೆಲವರು ಈ ವೃಕ್ಷವನ್ನು ನೆಡುವುದು ಒಂದು ಯಜ್ಞವೇದಿಯನ್ನು ನಿರ್ಮಿಸುವದಕ್ಕೆ ಸಾದೃಶ್ಯವೆಂದು ಭಾವಿಸುತ್ತಾರೆ. ಪ್ರಾಚೀನ ಕಾನಾನ್ಯರು ತಮ್ಮ ಆರಾಧನೆಗಳಲ್ಲಿ ಮರಗಳನ್ನು, ಸ್ತಂಭಗಳನ್ನು, ಮತ್ತು ಯಜ್ಞವೇದಿಗಳನ್ನು ಬಳಸುತ್ತಿದ್ದರು, ಮತ್ತು ಇವುಗಳು ಕೀಳುಮಟ್ಟಕ್ಕಿಳಿಯುವ ಸಂತಾನೋತ್ಪತ್ತಿಯ ಧಾರ್ಮಿಕ ವಿಧಿಗಳೊಂದಿಗೆ ಸಂಬಂಧ ಹೊಂದಿರುತ್ತಿದ್ದವು. ಅನಂತರದಲ್ಲಿ, ಅನ್ಯಧರ್ಮದವರನ್ನು ಅನುಕರಣೆ ಮಾಡಬೇಕೆಂಬ ಒಲವು ಇಸ್ರಾಯೇಲ್ಯರಲ್ಲಿದ್ದ ಕಾರಣ, ಯೆಹೋವನನ್ನು ಆರಾಧಿಸುವದರಲ್ಲಿ ಮರಗಳ ಬಳಕೆಯನ್ನು ಮೋಶೆಯ ಧರ್ಮಶಾಸ್ತ್ರವು ನಿಷೇಧಿಸಿತ್ತು (ಧರ್ಮೋಪದೇಶಕಾಂಡ 16:21). ಅಬ್ರಹಾಮನು ದೇವರನ್ನು ಆರಾಧಿಸುವದಕ್ಕಾಗಿ ಕಾನಾನ್ಯರ ಗುಡಿಗಳ ಬಳಕೆಯನ್ನು ಮಾಡುತ್ತಿರಲಿಲ್ಲ ಮತ್ತು ಸ್ವತಃ ತಾನೇ ಯಜ್ಞವೇದಿಗಳನ್ನು ಕಟ್ಟಿಕೊಳ್ಳುತ್ತಿದ್ದನಾದ್ದರಿಂದ, ಮರಗಳೊಂದಿಗೆ ಸಂಬಂಧ ಹೊಂದಿರುವ ಸಂತಾನೋತ್ಪತ್ತಿಯ ಧಾರ್ಮಿಕ ವಿಧಿಗಳ ಬಗ್ಗೆ ಅವನಿಗೆ ಅರುಹು ಇದ್ದಿರಬಹುದಾಗಿದೆ. ಆತನಿಗೆ ಈ ಆಚಾರಗಳ ಬಗ್ಗೆ ಗೊತ್ತಿಲ್ಲದೆ ಇದ್ದಾಗ್ಯೂ, ಆತನು ನೆಟ್ಟಿದ್ದ ಮರಗಳು ಒಂದು ಆರಾಧನೆಯ ವಸ್ತುಗಳೆಂಬ ಯಾವ ಮಹತ್ವವನ್ನೂ ಆತನ ದೃಷ್ಟಿಯಲ್ಲಿ ಹೊಂದಿರಲಿಲ್ಲ. ಅದು ಅನೇಕ ವರ್ಷಗಳಲ್ಲಿ ಬೆಳೆಯುತ್ತಿರುವ ವೇಳೆ, ಅದು ಯೆಹೋವನನ್ನು ಆರಾಧಿಸುವದಕ್ಕಾಗಿ ಆತನಿಗೆ ತಣ್ಣನೆಯ ಸ್ಥಳವನ್ನು ಒದಗಿಸಿರಬಹುದಾಗಿದೆ ಅಷ್ಟೆ.

ಈ ಘಟನೆಯ ಮತ್ತೊಂದು ಅರ್ಥನಿರೂಪಣೆಯು ಅಬೀಮೆಲೆಕನು ಮೂಲಪಿತೃವಿಗೆ ದೇಶದಲ್ಲಿ ಅವನು ಇಷ್ಟ ಬಂದ ಸ್ಥಳದಲ್ಲಿ ನೆಲೆಸಬಹುದೆಂದು ಅನುಮತಿ ಕೊಟ್ಟಿದ್ದನು (20:15) ಎಂಬುದನ್ನು ಲೆಕ್ಕಕ್ಕೆ ತೆಗೆದುಕೊಳ್ಳುತ್ತದೆ. ಇವರಿಬ್ಬರು ಬೇರ್ಷೆಬದಲ್ಲಿನ ಬಾವಿಯು ಅಬ್ರಹಾಮನದ್ದೆಂದು ಗುರುತಿಸುವಂಥ ಪ್ರಮಾಣದೊಂದಿಗೆ ಆಕ್ರಮಣ ಮಾಡದಿರುವ ಒಪ್ಪಂದವನ್ನು ಮಾಡಿಕೊಂಡಿದ್ದರು. ಮೂಲಪಿತೃವು ತನ್ನ ಮಂದೆಗಳು ಮತ್ತು ಹಿಂಡುಗಳು ಮೇಯುತ್ತಿದ್ದ ಮತ್ತು ಆತನ ಪರಿವಾರದವರು ವಾಸಿಸುತ್ತಿದ್ದ ಭೂಮಿಯು ತನಗೆ ಸೇರಿದ್ದೆಂದು ಹಕ್ಕು ಸಾಧಿಸುವದೇ ಮರವನ್ನು ನೆಡುವದರ ಉದ್ದೇಶವಾಗಿದ್ದಿರಬಹುದು.

ಈ ಅರ್ಥನಿರೂಪಣೆಯಲ್ಲಿರುವ ಸಮಸ್ಯೆಯು ಏನೆಂದರೆ ಮೂಲಪಿತೃ ಮತ್ತು ಅಬೀಮೆಲೆಕನ ನಡುವಿನ ಒಡಂಬಡಿಕೆಯು ಕೇವಲ ಆಕ್ರಮಣ ಮಾಡದಿರುವ ಒಪ್ಪಂದವಾಗಿತ್ತೆಂದು ಕಾಣಿಸುತ್ತದೆ, ಹೀಗೆ ಮೂಲಪಿತೃವನ್ನು ದೇಶದಲ್ಲಿ ಒಬ್ಬ ಭೂಒಡೆಯನಾಗಿ ಅಲ್ಲ, ಆದರೆ ಪರದೇಶದವನಾಗಿ ("ಇಳುಕೊಂಡವನಾಗಿ"; 21:23) ಇರುವಂತೆ

ಅನುಮತಿಸುವದಾಗಿತ್ತು. ಶಾಂತಿ ಒಪ್ಪಂದವನ್ನು ಊರ್ಜಿತಗೊಳಿಸಿದ ಬಳಿಕ, ಅರಸನು ಅಬ್ರಹಾಮನ ಆಳುಗಳು ಅಗೆದಿದ್ದ ಬಾವಿಯ ಮೇಲೆ ತನಗಿದ್ದ ಹಕ್ಕನ್ನು - ಒಂದು ಪ್ರಮಾಣ ಮಾಡುವ ಮೂಲಕ - ಬಿಟ್ಟು ಕೊಟ್ಟಿದ್ದನು (21:30, 31), ಹೊರತು ಅಬೀಮೆಲೆಕನು ಒಂದಿಷ್ಟು ನಿಯಂತ್ರಣವನ್ನು ಹೊಂದಿದ್ದಂಥ ಭೂಪ್ರದೇಶವನ್ನು ಬಿಟ್ಟು ಕೊಟ್ಟಿರಲಿಲ್ಲ. ಅಷ್ಟುಮಾತ್ರವಲ್ಲದೆ, ಹೊಸ ಒಡಂಬಡಿಕೆಯು ಮೂಲಪಿತೃವನ್ನು "ವಾಗ್ದಾತ್ತದೇಶಕ್ಕೆ ಬಂದಾಗ ಅಲ್ಲಿ ಅನ್ಯದೇಶದಲ್ಲಿ ಇದ್ದವನಂತೆ ಡೇರೆಗಳಲ್ಲಿ ಇದ್ದುಕೊಂಡು ಪ್ರವಾಸಿಯಾಗಿ ಬದುಕಿದನು" ಎಂದು ಚಿತ್ರಿಸುತ್ತದೆ (ಇಬ್ರಿಯ 11:9). ಅಬ್ರಹಾಮನು "ಕಾಲಿಡುವಷ್ಟು ಭೂಮಿಯನ್ನು ಸ್ವಾಸ್ತ್ಯವಾಗಿ ಕೊಡ"ಲಿಲ್ಲ ಎಂದು ಸ್ತೇಫನನು ಹೇಳುತ್ತಾನೆ (ಅಪೊಸ್ತಲರ ಕೃತ್ಯಗಳು 7:5).[21] ಸ್ಪಷ್ಟವಾಗಿರುವ ಪ್ರಕಾರ, ಒಂದು ಬಾವಿಯು ಆತನ ಕಾಲಿಡುವಷ್ಟು ಬಾಧ್ಯವೂ ಆಗಿರಲಿಲ್ಲ; ಅದಕ್ಕೆ ತದ್ವಿರುದ್ಧವಾಗಿ, ಅದು ಯಾರಿಗೂ ನಿಂತುಕೊಳ್ಳಲು ಸಾಧ್ಯವಾಗದಂತೆ ಭೂಮಿಯಲ್ಲಿರುವ ಒಂದು ರಂಧ್ರವಾಗಿತ್ತಷ್ಟೆ.

ಹೊಸದಾಗಿ ನೆಟ್ಟಿದ್ದ ಮರವು ಆ ಸ್ಥಳದಲ್ಲಿ ಬಾವಿಯ ಮೇಲಿನ ಒಡೆತನದ ವಿಷಯವಾಗಿ ಇಬ್ಬರೂ ಮಾಡಿದ ಪ್ರಮಾಣಕ್ಕೆ ಒಂದು ಸ್ಮಾರಕವಾಗಿ ಮಾತ್ರವೇ ನಿಂತಿರಬಹುದಾಗಿದೆ. ಕೃತಜ್ಞತೆಯುಳ್ಳವನಾಗಿ, ಅಬ್ರಹಾಮನು ಸ್ವಾಭಾವಿಕ ರೀತಿಯಲ್ಲಿಯೇ ಆರಾಧನೆ ಮಾಡುವವನಾಗಿ ಪ್ರತಿಕ್ರಿಯಿಸಿದನು, **ನಿತ್ಯದೇವರಾದ** [אֵל עוֹלָם, *ಎಲ್ ಒಲಾಮ್*, "ನಿತ್ಯನಾದ ದೇವರು"] **ಯೆಹೋವನ ಹೆಸರನ್ನು ಹೇಳಿಕೊಂಡನು**. ಯೆಹೋವನು - ಹುಟ್ಟಿರುವವರೆಂದು ಹೇಳಲ್ಪಡುವ ಮತ್ತು ಆ ಕಾರಣದಿಂದ ಮರಣಿಸತಕ್ಕವರಾಗಿದ್ದಂಥ ಅನ್ಯಧರ್ಮಿಯ ಪೌರಾಣಿಕ ದೇವರುಗಳಂತಲ್ಲದೆ - ಆದಿಯೂ ಅಂತ್ಯವೂ ಇಲ್ಲದ ನಿತ್ಯನಾದ ದೇವರಾಗಿದ್ದಾನೆಂದು ಅವನಿಗೆ ಗೊತ್ತಿತ್ತು. ಈತನು *ಎಲ್ ಶಡ್ಡಾಯ್* ("ಸರ್ವಶಕ್ತ ದೇವರು"; 17:1), ಈತನು ಅಬ್ರಹಾಮನ ಮುಖಾಂತರವಾಗಿ ಭೂಲೋಕದಲ್ಲಿರುವ ಸಕಲ ಕುಟುಂಬಗಳನ್ನು ಆಶೀರ್ವದಿಸುವೆನೆಂದು ವಾಗ್ದಾನ ಮಾಡಿದನು ಮತ್ತು ಇಷ್ಟು ವರ್ಷಗಳಿಂದಲೂ ಆತನಿಗೆ ಒದಗಿಸಿ ಕೊಟ್ಟು ಕಠಿಣವಾದ ಸಂಕಷ್ಟಗಳಿಂದ ಮತ್ತು ಅಪಾಯಗಳಿಂದ ಬಿಡಿಸಿ ಕಾಪಾಡಿದವನು. ಯೆಹೋವನು ಇವನಿಗೂ ಇವನ ಹೆಂಡತಿಯಾದ ಸಾರಳಿಗೂ, ಅವರ ದೇಹಗಳು ಸ್ವಾಭಾವಿಕವಾಗಿ ಸಂತಾನೋತ್ಪತ್ತಿ ಮಾಡಲಾಗದಂತೆ ಮೃತಪ್ರಾಯದವುಗಳಾಗಿದ್ದಾಗ ನವೀಕರಿಸಲ್ಪಟ್ಟ ಜೀವನವನ್ನು ಕೊಟ್ಟಿದ್ದನು; ಮತ್ತು ಈಗ ಅವರಿಗೆ ಒಬ್ಬ ಆರೋಗ್ಯವಂತ ಮಗ, ಇಸಾಕನು ಇದ್ದನು. ಅಂತಿಮವಾಗಿ, ಈ ಸಂದರ್ಭದಲ್ಲಿ, ದೇವರು ಅಬೀಮೆಲೆಕನ ಹೃದಯವನ್ನು ಮುಟ್ಟಿದ್ದನು ಮತ್ತು ಆತನು ಕಾನಾನಿನ ದೇಶದಲ್ಲಿ ಪರದೇಶಿಯಾಗಿದ್ದ ಅಬ್ರಹಾಮನ ಕಡೆಗೆ ಸೌಜನ್ಯಯುತನಾಗಿರುವಂತೆ ಮಾಡಿದ್ದನು. ಕೃತಜ್ಞತೆ ತುಂಬಿದ ಹೃದಯದೊಂದಿಗೆ, ಅಬ್ರಹಾಮನು ನಿತ್ಯನಾದ ದೇವರಾದ ಯೆಹೋವನನ್ನು ಆರಾಧಿಸಿದನು.

**ವಚನ 34.** ಬೈಬಲಿನ ಲೇಖಕನು ಮೂಲಪಿತೃವಿನ ಜೀವಿತದಲ್ಲಿನ ಈ ಘಟನಾವಳಿಯನ್ನು ಸಾರಂಶಗೊಳಿಸುತ್ತಾ ಹೇಳಿದ್ದೇನೆಂದರೆ **ಅಬ್ರಹಾಮನು ಫಿಲಿಷ್ಟಿಯರ ದೇಶದಲ್ಲಿ ಬಹುದಿವಸ ಇಳುಕೊಂಡಿದ್ದನು**. ಈ ಸಮಯದಲ್ಲಿ, "ಫಿಲಿಷ್ಟಿಯರ ದೇಶ"ವು ಕಾನಾನ್ ದೇಶದ ಆಗ್ನೇಯ ದಿಕ್ಕಿನ ಕಡೆಯಲ್ಲಿದ್ದ ಭಾಗಕ್ಕೆ ಯಾವದೇ ಸ್ಥಿರಪಡಿಸಲ್ಪಟ್ಟ ಗಡಿಗಳನ್ನು ಹೊಂದಿರಲಿಲ್ಲ. ಹೀಗೆ, ಒಂದು ಅರ್ಥದಲ್ಲಿ, ಅಬೀಮೆಲೆಕ ಮತ್ತು ಫೀಕೋಲರು ಬೇರ್ಷೆಬವನ್ನು ಬಿಟ್ಟು "ಫಿಲಿಷ್ಟಿಯರ ದೇಶಕ್ಕೆ ತಿರಿಗಿ ಹೊರಟು ಹೋದರು" (21:32). ಆದಾಗ್ಯೂ, ಇನ್ನೊಂದು ಅರ್ಥದಲ್ಲಿ, ಅಬ್ರಹಾಮನು ವಾಸಿಸುತ್ತಿದ್ದ ದೇಶವು ಅವರ ಅಧಿಕಾರ ವ್ಯಾಪ್ತಿಯೊಳಗೆ ಇತ್ತು; ಆತನು ಫಿಲಿಷ್ಟಿಯರ ದೇಶದಲ್ಲಿ ಸ್ವಲ್ಪ ಕಾಲ ಉಳಿದುಕೊಂಡಿದ್ದನು. "ಇಳುಕೊಂಡಿದ್ದನು" (גּוּר, *ಗುರ್)*

ಎಂಬ ಪದದ ಅರ್ಥವು ಆತನು ಕಾನಾನ್ ದೇಶದಲ್ಲಿ ಒಬ್ಬ "ಪ್ರವಾಸಿಯಾಗಿ" ಅಥವಾ "ವಾಸವಾಗಿರುವ ಪರದೇಶಿಯಾಗಿ" ಜೀವಿಸುವದನ್ನು ಮುಂದುವರೆಸಿದನು, ಅಂದರೆ, ಈ ಆರಂಭಿಕ ಫಿಲಿಷ್ಟಿಯರಿಗೆ ಬಹಳ ನಿಕಟತ್ವದಲ್ಲಿ ವಾಸಿಸುತ್ತಿದ್ದನು.

## ಅನ್ವಯಿಸುವಿಕೆ

**ಸಮಾಧಾನ ಏರ್ಪಡಿಸುವವನಾದ ಅಬ್ರಹಾಮನು (ಅಧ್ಯಾಯಗಳು 20; 21)**

ದೇವರು ಯಾವಾಗಲೂ ತನ್ನ ಜನರು "ಸಮಾಧಾನಪಡಿಸುವವರು" ಆಗಿರಬೇಕೆಂದು ಬಯಸಿರುತ್ತಾನೆ, ಮತ್ತು ಯೇಸುವು ಅಂಥ ವ್ಯಕ್ತಿಗಳನ್ನು ಆಶೀರ್ವದಿಸಿದನು (ಮತ್ತಾಯ 5:9). ನಾವು ಏನೇ ಬೆಲೆಯನ್ನು ತೆತ್ತಬೇಕಾದರೂ ಸಮಾಧಾನ ಬಯಸಬೇಕು ಎಂದರ್ಥವಲ್ಲ, ಅಥವಾ ಸಮಾಧಾನವನ್ನು ಸಾಧಿಸಿಕೊಳ್ಳಬೇಕೆಂಬುದಕ್ಕಾಗಿ ನಮ್ಮ ತತ್ವಗಳನ್ನು ರಾಜಿ ಮಾಡಿಸಿಕೊಳ್ಳಬೇಕೆಂಬುದೂ ಸಹ ಅದರ ಅರ್ಥವಲ್ಲ. ನಾವು ಯಾವಾಗಲೂ ತಟಸ್ಥರಾಗಿರುವ ಅಗತ್ಯವಿಲ್ಲ; ನಾವು ನಮ್ಮ ಜೀವಿತಗಳನ್ನು ಅಥವಾ ನಮ್ಮ ಕುಟುಂಬದ ಜೀವಿತವನ್ನು ಅಪಾಯಕ್ಕೀಡು ಮಾಡಬಹುದಾದ ಕೆಟ್ಟತನವನ್ನು ಎದುರಿಸತಕ್ಕದ್ದು. ಪೌಲನು ಹೀಗೆ ಬರೆದನು, "ಸಾಧ್ಯವಾದರೆ ನಿಮ್ಮಿಂದಾಗುವ ಮಟ್ಟಿಗೆ ಎಲ್ಲರ ಸಂಗಡ ಸಮಾಧಾನದಿಂದಿರಿ," ಮತ್ತು ವೈಯಕ್ತಿಕವಾಗಿ "ಮುಯ್ಯಿ ತೀರಿಸುವದಕ್ಕೆ" ಎಂದಿಗೂ ಪ್ರಯತ್ನಿಸದಿರಿ; ಸಮಾಧಾನಗೊಳಿಸುವವರು "ಮುಯ್ಯಿ ತೀರಿಸುವದನ್ನು" ದೇವರಿಗೆ ಬಿಟ್ಟು ಬಿಡುತ್ತಾರೆ (ರೋಮಾ 12:18, 19). ಪ್ರಾಚೀನ ಸಮಯಗಳಿಂದಲೂ, ಯಾವದೇ ಸರ್ಕಾರಿ ಪ್ರತಿನಿಧಿ ಸಂಸ್ಥೆಯಾಗಲಿ ಇರದಿದ್ದಾಗ ಅಥವಾ ಸರ್ಕಾರವು ತನ್ನ ಜನರನ್ನು ಕಾಪಾಡುವದಕ್ಕೆ ಮತ್ತು ಕೆಟ್ಟತನ ನಡಿಸುವವರನ್ನು ದಂಡಿಸುವದಕ್ಕೆ ಅಸಮರ್ಥವಾಗಿದ್ದರೆ (ರೋಮಾ 13:1-7), ದೇವರು ತನ್ನ ಮುಯ್ಯಿ ತೀರಿಸುವದಕ್ಕೆ ವ್ಯಕ್ತಿಗಳನ್ನು ಅಥವಾ ಗುಂಪುಗಳನ್ನು ಬಳಸಿಕೊಂಡನು (9:5, 6).

ಅಬ್ರಹಾಮನು ಸಮಾಧಾನಪಡಿಸುವವನಾಗಿದ್ದನು, ಆದರೂ ಯಾವಾಗಲೂ ಸರಿಯಾದ ವಿಧದಲ್ಲಂತೂ ಆಗಿರಲಿಲ್ಲ. ಅವನ ಸ್ವಂತ ಭದ್ರತೆಯ ವಿಷಯವಾದ ಭಯದಿಂದ, ಆತನು ತನ್ನ ಹೆಂಡತಿಯ ಕುರಿತಾಗಿ ಕನಿಷ್ಠ ಎರಡು ಸಂದರ್ಭಗಳಲ್ಲಿ ಸುಳ್ಳಾಡಿದನು. ಆತನು ಐಗುಪ್ತದಲ್ಲಿ ಫರೋಹನಿಗೆ ಸುಳ್ಳು ಹೇಳಿದನು (12:10-20) ಮತ್ತು ಪುನಃ ಗೆರಾರಿನ ಅಬೀಮೆಲೆಕನಿಗೆ ಸುಳ್ಳಾಡಿದನು (20:1-18). ಆತನು ತನ್ನ ಸ್ವಂತ ಪ್ರಾಣವನ್ನು ಗಂಡಾಂತರಕ್ಕೀಡು ಮಾಡಿಕೊಳ್ಳುವದಕ್ಕಿಂತಲೂ ತನ್ನ ಸ್ವಂತ ಹೆಂಡತಿಯನ್ನು ಆ ಇಬ್ಬರು ಅನ್ಯಧರ್ಮಿಯ ಅರಸರ ಕಾಮಾಭಿಲಾಷೆಗೆ ಒಪ್ಪಿಸಿ ಕೊಡುವದಕ್ಕೆ ಮನಸ್ಸುಳ್ಳವನಾಗಿದ್ದನು. ನಾವು ಈಗಾಗಲೇ ನೋಡಿರುವಂತೆ, ಅಬ್ರಹಾಮನು ಒಬ್ಬ ಐಶ್ವರ್ಯವಂತನಾದ ಮುಖ್ಯಸ್ಥನಾಗಿದ್ದನು. ಆತನ ಆರಂಭಿಕ ವರ್ಷಗಳಲ್ಲಿಯೇ, ಆತನ ಬಳಿಯಲ್ಲಿ 318 ಯುದ್ಧವೀರರನ್ನು ಒಳಗೊಂಡ ಖಾಸಗಿ ಸೈನ್ಯವಿತ್ತು (14:14), ಮತ್ತು ಅಷ್ಟೊಂದು ವರ್ಷಗಳಲ್ಲಿ ಅವರ ಸಂಖ್ಯೆಯು ಇಮ್ಮಡಿಗೊಂಡಿರಬಹುದಾಗಿದೆ. ಆದದರಿಂದ, ಆತನು ಈ ಅರಸರ ಬೇಡಿಕೆಯನ್ನು ನಿರಾಕರಿಸಿದ್ದಲ್ಲಿ ಸಾರಳಿಗೋಸ್ಕರವಾಗಿ ಅವರಿಬ್ಬರೂ ಇವನ ವಿರುದ್ಧವಾಗಿ ಯುದ್ಧಕ್ಕೆ ಬಂದಿರುತ್ತಿದ್ದರೆಂಬುದು ಸಂದೇಹಕರವಾಗಿದೆ. ಹಾಗಿದ್ದರೂ, ಈತನು ಹೇಡಿತನದ ದಾರಿಯನ್ನು ಅನುಸರಿಸಿದನು ಮತ್ತು ತನ್ನನ್ನು ರಕ್ಷಿಸಿಕೊಳ್ಳಲು ಸುಳ್ಳು ಹೇಳಿದನು.

ಇನ್ನೊಂದೆಡೆಯಲ್ಲಿ, 14ನೇ ಅಧ್ಯಾಯದೊಳಗೆ, ಅಬ್ರಹಾಮನು ಮೂಡಣದ ನಾಲ್ಕು

ಮಂದಿ ಅರಸರು ಯೋರ್ದನ್ ಕಣಿವೆಯ ಮೇಲೆ ಆಕ್ರಮಣ ಮಾಡಿದ್ದ ವೇಳೆ ಧೈರ್ಯಗಾರಿಕೆಯನ್ನು ತೋರಿಸಿದ್ದನು. ಅವರು ಐದು ಮಂದಿ ರಾಜರ ಮೈತ್ರಿ ಸೇನೆಯನ್ನು ಸೋಲಿಸಿ ಲೋಟ ಮತ್ತು ಆತನ ಕುಟುಂಬವು ಸೇರಿದಂತೆ ಜನರನ್ನು ಸೆರೆಯಾಗಿ ಕೊಂಡೊಯ್ದರು. ಈ ಹೊತ್ತಿಗಾಗಲೆ, ಅಬ್ರಹಾಮನು ಈಗಾಗಲೇ ಮೋರಿಯದ ಮೂವರು ಸಹೋದರರ ಮತ್ತು ಅವರ ಜನರ ಸಂಗಡ ಒಂದು ರಕ್ಷಣಾ ಮೈತ್ರಿಯನ್ನು ಮಾಡಿಕೊಂಡಿದ್ದನು. ಅವರೆಲ್ಲರ ಸೈನ್ಯಗಳೆಲ್ಲವು ಒಟ್ಟಾಗಿ ಸೇರಿದರೂ ಅಷ್ಟೇನೂ ದೊಡ್ಡದಲ್ಲದಿದ್ದಾಗ್ಯೂ, ಅವರು ಚತುರತೆಯಿಂದ ಯೋಚನೆಯನ್ನು ಮಾಡುವದಾದರೆ ಗೆಲುವನ್ನು ಸಾಧಿಸಬಹುದಿತ್ತು. ಆದದರಿಂದ, ಅವರು ರಾತ್ರಿಯ ವೇಳೆಯಲ್ಲಿ ಏಕಾಏಕಿ ಒಟ್ಟಿಗೆ ದಾಳಿ ಮಾಡಿ ತಮಗಿಂತ ಶ್ರೇಷ್ಠವಾದ ಮೂಡಣದ ರಾಜರ ಮಿಲಿಟರಿ ಶಕ್ತಿಯನ್ನು ಸೋಲಿಸಿದರು, ಸೆರೆಯಾಳುಗಳನ್ನು ಅವರ ಸ್ವತ್ತುಗಳೆರಡನ್ನೂ ಮರಳಿ ವಶಪಡಿಸಿಕೊಂಡರು. ಈ ಪ್ರಕರಣದಲ್ಲಿ, ಅಬ್ರಹಾಮನು ಲೋಟ, ಆತನ ಕುಟುಂಬ, ಮತ್ತು ದಾಳಿಗೆ ಬಲಿಯಾಗಿದ್ದ ಬೇರೆ ಜನರನ್ನು ಬಿಡಿಸುವದಕ್ಕಾಗಿ ಯುದ್ಧಕ್ಕೆ ಹೋಗಬೇಕಾಗಿತ್ತು. ಆತನು ಈ ನಿರ್ಣಾಯಕವಾದ ಯುದ್ಧವನ್ನು ಗೆಲ್ಲುವ ಮೂಲಕ ಸಮಾಧಾನ ಏರ್ಪಡಿಸುವ ವ್ಯಕ್ತಿಯಾದನು.

14ನೇ ಅಧ್ಯಾಯದಲ್ಲಿ ಶಸ್ತ್ರಗಳನ್ನು ಎತ್ತಿಕೊಳ್ಳುವಂತೆ ನೀಡಲ್ಪಟ್ಟ ಕರೆಯು ಈ ನಿಯಮಕ್ಕೆ ಹೊರತಾಗಿರುವಂಥದ್ದೆಂದು ಕಾಣಿಸುತ್ತದೆ. ನಾವು ಮೂಲಪಿತೃವಿನ ಜೀವಿತದಲ್ಲಿ ಈ ವಿಧವಾದ ಬೇರೆ ಇನ್ನಾವ ಘಟನೆ ಬಗ್ಗೆಯೂ ಓದುವದಿಲ್ಲ. ಅಬೀಮೆಲೆಕ ಮತ್ತು ಫೀಕೋಲರು ಅಬ್ರಹಾಮನ ಜನರ ಮತ್ತು ಫಿಲಿಷ್ಟಿಯರ ನಡುವೆ ಸಮಾಧಾನವನ್ನು ಖಾತ್ರಿಪಡಿಸುವದಕ್ಕಾಗಿ ಆಕ್ರಮಣ ಮಾಡದಿರುವ ಒಪ್ಪಂದವನ್ನು ಮಾಡಿಕೊಳ್ಳಲು ಈತನ ಬಳಿಗೆ ಬಂದಾಗ, ಮೂಲಪಿತೃವು ತ್ವರಿತವಾಗಿ ಅದಕ್ಕೆ ಸಮ್ಮತಿಸಿದ್ದನು. ಆತನು ಒಂದೇ ಒಂದು ರಿಯಾಯಿತಿಯನ್ನು ಕೇಳಿಕೊಂಡನು, ಆತನ ಸೇವಕರು ಅಗೆದಿದ್ದ ಬಾವಿಯನ್ನು ಆತನಿಗೆ ಹಿಂದಿರುಗಿಸಬೇಕು ಎಂಬುದೆ; ಮತ್ತು ಅರಸನು ಅದಕ್ಕೆ ಒಪ್ಪಿದನು. ಅಬೀಮೆಲೆಕನಿಂದ ಅಬ್ರಹಾಮನಿಗೆ ಅಂತಹ ಒಪ್ಪಂದದ ಪ್ರಸ್ತಾವಿಡಲ್ಪಡುವುದು ಅಸಹಜವಾಗಿರುತ್ತದೆ ಯಾಕೆಂದರೆ ಆತನು ಬೆಳೆಯುತ್ತಿರುವ ಅಬ್ರಹಾಮನ ಪರಿವಾರದವರನ್ನು ಕಂಡು ಹೆದರಿದ್ದನು ಮತ್ತು ಮೂಲಪಿತೃವು ಮಾಡುವ ಎಲ್ಲಾ ಕಾರ್ಯಗಳಲ್ಲಿಯೂ ದೇವರು ಅವನೊಂದಿಗಿದ್ದಾನೆ ಎಂಬುದನ್ನು ಗುರುತಿಸಿದ್ದನು (21:22).

ಇಸ್ರಾಯೇಲ್ ಮತ್ತು ಯೆಹೂದದಲ್ಲಿನ ಕಡೆಯ ಅರಸರಲ್ಲಿ ಕೆಲವರು ಮಾಡಿದ ರೀತಿಯಲ್ಲಿ, ಅಬ್ರಹಾಮನು ಈ ಅನ್ಯಧರ್ಮಿಯ ಅರಸನ ಸಂಗಡ ಸಮಾಧಾನ ಒಡಂಬಡಿಕೆಯನ್ನು ಮಾಡಿಕೊಳ್ಳುವ ಮೂಲಕ ತನ್ನ ನಂಬಿಕೆಯನ್ನು ರಾಜಿ ಮಾಡಿಕೊಳ್ಳಲಿಲ್ಲ. ಅದಕ್ಕೆ ತದ್ವಿರುದ್ಧವಾಗಿ, ಮೂಲಪಿತೃವು ಮತ್ತು ಅಬೀಮೆಲೆಕನು ತಮ್ಮ ಒಪ್ಪಂದವನ್ನು ಪೂರ್ತಿಗೊಳಿಸಿದ ಬಳಿಕ, ಈತನು “ನಿತ್ಯನಾದ ದೇವರಾಗಿರುವ” ಯೆಹೋವನನ್ನು ಆರಾಧಿಸಿದನು (21:33). ಆಕ್ರಮಣ ಮಾಡದಿರುವಿಕೆಯ ಒಪ್ಪಂದ (ಸಮಾಧಾನ ಒಡಂಬಡಿಕೆ) ಮತ್ತು ಸತ್ಯ ದೇವರನ್ನು ಆರಾಧಿಸುವದರ ನಡುವೆ ಜೋಡನೆಯನ್ನು ಮಾಡುವುದು ಸೂಚಿಸುವದೇನೆಂದರೆ ಒಬ್ಬ ಸಮಾಧಾನ ಏರ್ಪಡಿಸುವವನಾಗಿ ಅಬ್ರಹಾಮನನ್ನು ಯೆಹೋವನು ಆಶೀರ್ವದಿಸುತ್ತಿದ್ದಾನೆ ಎಂಬುದೆ.

ಯೇಸುವು ಈ ಲೋಕದೊಳಗೆ “ಸಮಾಧಾನ ಪ್ರಭು” ಆಗಿ ಬಂದನು (ಯೆಶಾಯ 9:6), ಮತ್ತು ಆತನ ಜನನವಾದ ಸಂದರ್ಭದಲ್ಲಿ ಒಬ್ಬ ದೇವದೂತನು ಹೀಗೆ ಸಾರಿದನು, “ಭೂಲೋಕದಲ್ಲಿ ... ಸಮಾಧಾನ” (ಲೂಕ 2:14). ಕ್ರಿಸ್ತನ ಸಮಾಧಾನವು ಇಷ್ಟಬಂದ ಹಾಗೆ

ನಾಶನ, ಕೊಲ್ಲುವಿಕೆ, ಸೆರೆ ಹಿಡಿಯುವಿಕೆ, ಮತ್ತು ಜನರನ್ನು ತಮ್ಮ ಸ್ವಾಧೀನಕ್ಕೆ ತೆಗೆದುಕೊಳ್ಳುವರಲ್ಲಿ ತೊಡಗಿದ ಸೈನ್ಯಗಳ ಮೂಲಕವಾಗಿ ಸಾಧಿಸಲ್ಪಡಲಿಲ್ಲ. ಯೇಸುವು ತನ್ನ ಸೇವೆಯ ಕಡೆಯ ವಾರವನ್ನು ಆರಂಭಿಸುವದಕ್ಕಾಗಿ ಯೆರೂಸಲೇಮನ್ನು ಪ್ರವೇಶಿಸುತ್ತಿದ್ದ ವೇಳೆ, ಆತನು ಒಂದು ಯುದ್ಧ ಕುದುರೆಯನ್ನಾಗಲಿ ಅಥವಾ ಮಿಲಿಟರಿ ರಥದಲ್ಲಾಗಲಿ ಸಂಚರಿಸುತ್ತಾ ಬರಲಿಲ್ಲ, ಆದರೆ ಒಂದು ಕತ್ತೆಯ ಮೇಲೆ ಕುಳಿತವನಾಗಿ ಬಂದನು, ಅದು ಭಾರವನ್ನು ಹೊರುವ ಒಂದು ಮೃಗವಾಗಿದೆ. ಆತನು ಜಕರ್ಯ 9:9, 10ರ ವಾಕ್ಯವನ್ನು ನೆರವೇರಿಸುವದಕ್ಕೆ ಹೀಗೆ ಮಾಡಿದನು, ಅದು ಹೇಳುವದೇನೆಂದರೆ ಆತನು "ಬಿಲ್ಲು," "ಕುದುರೆ," ಮತ್ತು ಯುದ್ಧ "ರಥವನ್ನು" "ಯೆರೂಸಲೇಮಿನಿಂದ" "ನಿಶ್ಯೇಷಮಾಡುವವನು" ಮತ್ತು "ಜನಾಂಗಗಳಿಗೆ ಸಮಾಧಾನಕರವಾಗಿರುವನು" ಎಂಬುದೆ. ಯೆಹೂದ್ಯರು ಬಯಸಿದ್ದು ಅಥವಾ ರೋಮನ್ನರು ಎದುರುನೋಡಿದ್ದು ಈ ವಿಧವಾದ ಮೆಸ್ಸೀಯನನ್ನು ಅಲ್ಲ (ಯೋಹಾನ 18:33-38). ಯೇಸುವು ಕತ್ತಿಗಳನ್ನು ಹಿಡಿದುಕೊಂಡವರಾಗಿ ಹೊರಗೆ ಹೋಗಿ ತನ್ನ ರಾಜ್ಯವನ್ನು ಪ್ರಚುರಪಡಿಸುವದಂತೆ ದೇವರ ಜನರನ್ನು ನಿಷೇಧಿಸಿದನು (ಮತ್ತಾಯ 26:52).

ಯೇಸುವು ತನ್ನ ವೈರಿಗಳನ್ನು ನಾಶಗೊಳಿಸುವದಕ್ಕೆ ಬರಲಿಲ್ಲ, ಆದರೆ ಅವರನ್ನು "ಹುಡುಕಿ ರಕ್ಷಿಸುವದಕ್ಕೆ" ಬಂದನು (ಲೂಕ 19:10). ಆತನು ಲೋಕದ ಪಾಪಗಳ ನಿವಾರಣಾರ್ಥವಾಗಿ ಮನಃಪೂರ್ವಕವಾಗಿ ಮರಣಿಸುವದರೊಂದಿಗೆ ಅವರ ಹೃದಯಗಳನ್ನು ಕರಗಿಸುವ ಮೂಲಕ ಈ ಕಾರ್ಯವನ್ನು ಮಾಡಿದನು (ಯೋಹಾನ 1:29; 3:16). ಇದೇ ಶಿಲುಬೆಯಲ್ಲಿರುವ ಸೆಳೆಯುವ ಶಕ್ತಿಯಾಗಿದೆ, ಶಿಲುಬೆಗೇರಿಸಲ್ಪಟ್ಟ ರಕ್ಷನ ಮೂಲಕ ಒಂದು ಹೊಸ ಹಾಗೂ ಭಿನ್ನ ರೀತಿಯಲ್ಲಿ ತೆರೆದು ಬಿಡಲ್ಪಟ್ಟ ಶಕ್ತಿಯಾಗಿದೆ (ಯೋಹಾನ 12:31-33).

ಹೇಗೂ, ಶಿಲುಬೆಯು ಸ್ವತಃ ಒಂದು ಅಂತ್ಯವಾಗಿರಲಿಲ್ಲ, ಅದು ಅಂತ್ಯಕ್ಕೆ ನಡಿಸುವ ಒಂದು ದಾರಿಯಾಗಿತ್ತು. ಮರಣಿಸುವ ಮೂಲಕ, ಯೇಸುವು ಮರಣಕ್ಕೆ ಅಂತಿಮ ಅಧಿಕಾರವಿಲ್ಲ ಎಂಬುದನ್ನು ತೋರಿಸಿ ಕೊಟ್ಟನು. ಆತನು ಮಹಿಮಕರವಾಗಿ ಪುನರುತ್ಥಾನಗೊಂಡು ಹೊಸ ಜೀವವನ್ನು ಪಡೆದದ್ದು ಒಂದು ನೂತನ ಯುಗದ ಆರಂಭವಾಗಿತ್ತು, ಅದು ಮೆಸ್ಸೀಯನಿಂದಾದ ಸಮಾಧಾನ ಆಳ್ವಿಕೆ. ಮಹಾ ಆದೇಶದ ಸಂದೇಶವು ಯೇಸು ಕ್ರಿಸ್ತನ ಮುಖಾಂತರವಾಗಿರುವ ಸಮಾಧಾನದ ಸುವಾರ್ತೆಯೇ (ಶುಭವರ್ತಮಾನ) (ಅಪೊಸ್ತಲರ ಕೃತ್ಯಗಳು 10:36-43). ತಮ್ಮೊಳಗೆ, ತಮ್ಮ ನೆರೆಯವರೊಂದಿಗೆ, ವೈರಿಗಳೊಂದಿಗೆ, ಅಥವಾ ದೇವರ ಸಂಗಡ ಯುದ್ಧದಲ್ಲಿ ತೊಡಗಿರುವ ಜನರಿಗೆ ಸ್ವತಃ ಸಮಾಧಾನ ಆಗಿರುವಂಥ ಒಬ್ಬ ರಕ್ಷಕನು ಇದ್ದಾನೆ (ಎಫೆಸ 2:13-18). ಆತನು ಎಲ್ಲಾ ಗ್ರಹಿಕೆಯನ್ನು ಮೀರುವ ಸಮಾಧಾನವನ್ನು ತರುತ್ತಾನೆ (ಫಿಲಿಪ್ಪಿ 4:7). ಅಬ್ರಹಾಮ ಮತ್ತು ಗತಕಾಲದ ಯುಗಗಳಲ್ಲಿ ಜನರು ಅನುಭವಿಸಿದ ಸಮಾಧಾನವು ಯೇಸುವು - ಮೂಲಪಿತೃವಿಗೆ ವಾಗ್ದಾನ ಮಾಡಲ್ಪಟ್ಟ "ಸಂತಾನ" (ಸಂತತಿ) (ಗಲಾತ್ಯ 3:8, 16, 26-29) - ತನ್ನ ಆತ್ಮೀಕ ಸಂತತಿಯವರಿಗೆ ಈಗಲೂ ಸದಾಕಾಲವೂ ಕೊಡುವಂಥ ಅಂತಿಮ ಸಮಾಧಾನದ ಕೇವಲ ಒಂದು ಮಂದವಾದ ಮುನ್‌ರುಚಿಯಾಗಿರುತ್ತದೆ.

## ಇಸಾಕನ ಸುತ್ತಲಿದ್ದವರು ಪ್ರತಿಕ್ರಿಯೆ (21:8-19)

ಹೊಟ್ಟೇಕಿಚ್ಚು, ಅಪಹಾಸ್ಯ, ಕೋಪ, ದುಃಖ, ಹತಾಶೆ, ಮತ್ತು ನಿರೀಕ್ಷೆ: ಇಸಾಕನ ಜನನದ ನಂತರ ಕುಟುಂಬದ ಪರಿಸ್ಥಿತಿಯ ಕಡೆಗೆ ಅಬ್ರಹಾಮನ ಕುಟುಂಬದ ಸದಸ್ಯರು ಹೊಂದಿದ್ದ ವಿವಿಧ ರೀತಿಯ ಪ್ರತಿಕ್ರಿಯೆಗಳಾಗಿದ್ದವು. ವಾಗ್ದಾನ ಮಗುವು ಬೆಳೆಯುತ್ತಿರುವ ವೇಳೆಯಲ್ಲಿ

ಆತನ ಕಡೆಗೆ ಇಸ್ಮಾಯೇಲನು ನಕಾರಾತ್ಮಕ ಮನೋಭಾವಗಳನ್ನು ತೋರಿಸಿದ್ದನು.

*ಇಸ್ಮಾಯೇಲನ ಪ್ರತಿಕ್ರಿಯೆ: ಹೊಟ್ಟೇಕಿಚ್ಚು ಮತ್ತು ಅಪಹಾಸ್ಯ* (21:8, 9). ಇಸ್ಮಾಯೇಲನು ಹೊಟ್ಟೇಕಿಚ್ಚಿನಿಂದ ಪ್ರತಿಕ್ರಿಯಿಸಿದ್ದು ಬಹುಶಃ ಅವನ ತಾಯಿಯಾದ ಹಾಗರಳಿಂದ ಪ್ರೋತ್ಸಾಹಿಸಲ್ಪಟ್ಟಿದ್ದಾಗಿರಬೇಕು, ಅವಳು ಅನೇಕ ವರ್ಷಗಳಿಂದ ತನ್ನ ಯಜಮಾನಿಯ ಕಡೆಗೆ ಹೊಟ್ಟೇಕಿಚ್ಚಿನಿಂದ ಇದ್ದಳು. ಸಾರಳು ವಾಗ್ದಾನದ ಮಗುವಿಗೆ ತಾಯಿಯಾದ ಮೇಲಂತೂ ಘರ್ಷಣೆಯು ಇನ್ನೂ ಅಧಿಕವಾಗಿ ಸ್ಪಷ್ಟಗೊಂಡಿತ್ತು. ಅಂತೂ, ಇಸ್ಮಾಯೇಲನು ಒಬ್ಬ ದಾಸಿಯ ಮಗನಾಗಿದ್ದಾಗ್ಯೂ, ಅಬ್ರಹಾಮನ ಏಕೈಕ ವಾರಸುದಾರನಾಗಿ ಉಳಿದಿದ್ದಲ್ಲಿ ಅವನಿಗೆ ದೊರಕುತ್ತಿದ್ದ ಬಾಧ್ಯತೆಯನ್ನು ಈ ಬಾಲಕನು ಪಡೆದುಕೊಳ್ಳುವದಕ್ಕೆ ನೇಮಿಸಲ್ಪಟ್ಟಿದ್ದನಷ್ಟೇ. ಹದಿನಾರು ಅಥವಾ ಹದಿನೇಳು ವಯಸ್ಸಿನಲ್ಲಿದ್ದ ಇಸ್ಮಾಯೇಲನು ಕೇವಲ ಸುಮಾರು ಮೂರು ವರ್ಷದವನಾಗಿದ್ದ ಹುಡುಗನ್ನು ಅಪಹಾಸ್ಯ ಮಾಡಿ ಹಿಂಸಿಸುವುದು ಎಂಥ ದುರಹಂಕಾರವಾಗಿತ್ತಲ್ಲವೇ! ಇಸ್ಮಾಯೇಲನು ಎಲ್ಲರ ಮೇಲೆ ಕೈಯೆತ್ತುವಂಥ ಒಂದು "ಕಾಡುಕತ್ತೆ" ರೀತಿಯಲ್ಲಿರುವನು ಎಂದು ದೇವರು ಮುಂತಿಳಿಸಿದ್ದನು (16:12), ಮತ್ತು ಆತನು ಈಗಾಗಲೇ ಹದಿಹರೆಯದವನಾಗಿ ಈಗಾಗಲೇ ಆ ಗುಣಸ್ವಭಾವವನ್ನು ತೋರ್ಪಡಿಸಲು ಆರಂಭಿಸಿದ್ದನು.

ಬಾಲಕನಾದ ಇಸಾಕನ ಕಡೆಗೆ ಇಸ್ಮಾಯೇಲನ ಪ್ರತಿಕ್ರಿಯೆಯು ಶರೀರಭಾವದ ಕರ್ಮಗಳು ಮತ್ತು ಪವಿತ್ರಾತ್ಮನಿಂದಾಗುವ ಫಲದ ನಡುವೆ ಇರುವಂಥ ಮೂಲಭೂತವಾದ ಘರ್ಷಣೆಯನ್ನು ದೃಷ್ಟಾಂತಪಡಿಸುತ್ತದೆ. ಕಾಯಿನನು ತನ್ನ ತಮ್ಮನ ಕಡೆಗೆ ಹೊಂದಿದ್ದ ಹೊಟ್ಟೇಕಿಚ್ಚಿನಿಂದ ಇದೇ ವಿಧವಾದ ಕಾದಾಟವು ಸ್ಫೋಟಗೊಂಡು ಹೊರಕ್ಕೆ ಬಂದು ಅಂತಿಮವಾಗಿ ಹೇಬೆಲನು ಕೊಲೆಯಾಗುವಂತೆ ನಡಿಸಿತ್ತು (4:3-8). ಪೌಲನು ಅನಂತರದಲ್ಲಿ ಅಂತಹ ಶರೀರಭಾವದ ಕರ್ಮಗಳ ಕುರಿತು ಸರ್ವೋತ್ಕೃಷ್ಟವಾದ ಪಟ್ಟಿಯನ್ನು ನೀಡುತ್ತಾನೆ, ಅದರಲ್ಲಿ ಹೊಟ್ಟೇಕಿಚ್ಚು ಮತ್ತು ಮತ್ಸರಗಳಂತಹ ಆಂತರೀಕ ಮನೋಭಾವಗಳು ಸೇರಿರುತ್ತವೆ, ಇವುಗಳು ಅನೇಕ ಸಾರಿ ಬಾಹ್ಯದಲ್ಲಿ ಜಗಳದ ಕೃತ್ಯಗಳಾಗಿ ಫಲಿತಗೊಳ್ಳುತ್ತವೆ (ಗಲಾತ್ಯ 5:19-21). ಅಪೊಸ್ತಲನು ಆ ವಿಧದಲ್ಲಿ ತೀರ್ಪು ಕೊಡುವದಕ್ಕೆ ಕಾರಣವೇನೆಂದರೆ, ಅಂತಹ ಆಂತರೀಕ ಮನೋಭಾವಗಳನ್ನು ತಡೆಗಟ್ಟದಿದ್ದಲ್ಲಿ ಅವುಗಳು ಯಾವಾಗಲೂ ಮಾನವ ಸಂಬಂಧಗಳಲ್ಲಿ ವಿನಾಶಕಾರಿಯಾಗುತ್ತವೆ ಎಂಬುದೆ.

ಯಾಕೋಬನ ಹೆಂಡತಿಯಾದ ರಾಹೇಲಳು ಬಂಜೆಯಾಗಿದ್ದಳು ಮತ್ತು ಆ ಕಾರಣದಿಂದ ಲೇಯಳ ಬಗ್ಗೆ ಹೊಟ್ಟೇಕಿಚ್ಚು ಹೊಂದಿದ್ದಳು, ಈಕೆಯು ಯಾಕೋಬನಿಗೆ ಮಕ್ಕಳನ್ನು ಹಡೆಯುವಲ್ಲಿ ಶಕ್ತಳಾಗಿದ್ದಷ್ಟೆ. ತಾನು ಗರ್ಭಿಣಿಯಾಗದಿರುವದಕ್ಕೆ ಯಾಕೋಬನು ಕಾರಣನೆಂದು ಆರೋಪವನ್ನು ಮಾಡಿದ ವೇಳೆ, ಆತನು ಆಕೆಯ ಮೇಲೆ ಕೋಪಗೊಂಡವನಾಗಿ ಹೀಗೆ ಕೇಳಿದನು, "ದೇವರು ನಿನಗೆ ಮಕ್ಕಳನ್ನು ಕೊಡದೆಹೋದ ಮೇಲೆ ಕೊಡಲಿಕ್ಕೆ ನನ್ನಿಂದಾದೀತೋ"? (30:2). ಯೋಸೇಫನ ಅಣ್ಣಂದಿರಿಗೆ ಇನ್ನು ಮೇಲೆ ಅವರ ತಂದೆಯ ನೆಚ್ಚಿನ ಮಗನ ದುರಹಂಕಾರವನ್ನು ತಾಳಿಕೊಳ್ಳಲು ಆಗದೆ ಹೋದಾಗ, ಅವರ ಹಗೆತನವು ಹೊರಗೆ ಜಗಳವಾಗಿ ಕಾಣಿಸಿಕೊಂಡಿತ್ತು ಮತ್ತು ಯೋಸೇಫನನ್ನು ಕೊಲೆ ಮಾಡುವ ಅಪಾಯ ಉಂಟಾಗಿತ್ತು.

ಹೊಟ್ಟೇಕಿಚ್ಚು ಮತ್ತು ಅಸೂಯೆಗಳು ಜಗಳ ಮತ್ತು ಹೃದಯ ವೇದನೆಯನ್ನು ಉಂಟು ಮಾಡುವವುಗಳಾಗಿದ್ದು, ಇವುಗಳು ದಾಂಪತ್ಯಗಳಲ್ಲಿ ಮತ್ತು ಕುಟುಂಬಗಳಲ್ಲಿ ವಿನಾಶಕಾರಿ ಮಾತ್ರವೇ ಅಲ್ಲ, ಆದರೆ ಜೀವನದ ಇತರ ಕ್ಷೇತ್ರಗಳಲ್ಲಿ ಸಹ ವಿನಾಶಕಾರಿಯಾಗಿವೆ. ಅಂಥ

ಮನೋಭಾವಗಳೇ ಯೆಹೂದ್ಯ ನಾಯಕರನ್ನು ಯೇಸುವಿಗೆ ಮರಣದಂಡನೆ ತೀರ್ಪು ಉಂಟಾಗುವಂತೆ ಮಾಡಲು ನಡಿಸಿದವು (ಮತ್ತಾಯ 27:18; ಮಾರ್ಕ 15:10), ಮತ್ತು ಅವುಗಳು ಆದಿ ಸಭೆಗಳ ಆತ್ಮೀಕ ಜೀವಕ್ಕೆ ಅಪಾಯವನ್ನು ತಂದಿಟ್ಟಂಥ ಭಿನ್ನಾಭಿಪ್ರಾಯಗಳಿಗೆ ದಾರಿ ಮಾಡಿಕೊಟ್ಟಿದ್ದವು (ನೋಡಿರಿ 1 ಕೊರಿಂಥ 3:3; 13:4; ಗಲಾತ್ಯ 5:26; ಫಿಲಿಪ್ಪಿ 1:15; 2:3; ಯಾಕೋಬ 3:14–16; 1 ಪೇತ್ರ 2:1, 2). ದೇವರ ಜನರು ಅಂತಹ ಮರಣಾಂತಿಕ ಪ್ರಭಾವಗಳಿಗೆ ಒಳಗಾಗದಂತೆ ಯಾವಾಗಲೂ ತಮ್ಮನ್ನು ಕಾಪಾಡಿಕೊಳ್ಳತಕ್ಕದ್ದು.

*ಸಾರಳ ಪ್ರತಿಕ್ರಿಯೆ; ಕೋಪ ಮತ್ತು ಹಗೆತನ* (21:10). ಸಾರಳ ಪ್ರತಿಕ್ರಿಯೆಯು ಇಸ್ಮಾಯೇಲನು ಇಸಾಕನನ್ನು ಅಪಹಾಸ್ಯಮಾಡಿ[22] ಅಣಕಿಸುವದನ್ನು ಕೇಳಿಕೊಂಡದ್ದರಿಂದ ಪ್ರಚೋದಿಸಲ್ಪಟ್ಟಿತ್ತು. ಆಕೆಯು ಆ ಹದಿಹರೆಯವನ ನುಡಿಗಳನ್ನು ಮತ್ತು ಕೃತ್ಯಗಳನ್ನು ಅಪಾಯಕಾರಿ, ಅವುಗಳು ಭವಿಷ್ಯದಲ್ಲಿ ತನ್ನ ಮಗನಿಗೆ ಹಾನಿಯನ್ನು ಮಾಡುವಂತೆ ನಡಿಸುವ ಸಾಧ್ಯತೆಯಿದೆ ಎಂದು ಅರ್ಥನಿರೂಪಣೆ ಮಾಡಿದಳು. ಈ ವಿಧವಾದ ಮೌಲ್ಯಮಾಪನದಲ್ಲಿ, ಸಾರಳು ಸರಿಯೇ ಆಗಿರಬಹುದಿತ್ತು; ಕೋಪಗೊಂಡಿದ್ದ ಅವಳು ತನ್ನ ಗಂಡನಿಗೆ ಹೀಗೆ ಹೇಳಿದಳು, "ಈ ದಾಸಿಯನ್ನೂ ಅವಳ ಮಗನನ್ನೂ ಹೊರಗೆ ಹಾಕು; ಈ ದಾಸಿಯ ಮಗನು ನನ್ನ ಮಗನಾದ ಇಸಾಕನೊಂದಿಗೆ ಬಾಧ್ಯನಾಗಬಾರದು" (21:10). ಗಂಡನು ತನ್ನ ದಾಸಿ-ಹೆಂಡತಿಯನ್ನು "ಹೊರಗೆ ಹಾಕುವುದು" (ವಿಚ್ಛೇದನ ನೀಡುವುದು) ಮತ್ತು ಇಸಾಕನ ಭದ್ರತೆಗೋಸ್ಕರ ಆಕೆಯು ತನ್ನೊಂದಿಗೆ ತನ್ನ ಮಗನನ್ನೂ ಕರೆದೊಯ್ಯಲಿ ಎಂದು ಸಾರಳು ತನ್ನ ಗಂಡನಿಗೆ ಬೇಡಿಕೆಯಿಟ್ಟಿದ್ದರಲ್ಲಿ ನ್ಯಾಯವಿದೆ ಎಂದು ಸಮರ್ಥಿಸಲ್ಪಟ್ಟಿರಬಹುದು. ಹೇಗೂ, ಆಕೆಯು ಅನೇಕ ವರ್ಷಗಳಿಂದಲೂ ಹಾಗರಳು ಹಾಗೂ ಇಸ್ಮಾಯೇಲನ ಮೇಲೆ ಹೊಟ್ಟೇಕಿಚ್ಚು ಮತ್ತು ಹಗೆತನಗಳನ್ನಿಟ್ಟುಕೊಂಡಿದ್ದಳು ಮತ್ತು ಈಗ ತನ್ನಿಂದ ಅವರಿಬ್ಬರನ್ನೂ ತೊಲಗಿಸಿಕೊಳ್ಳಲು ಈ ಸಂದರ್ಭದ ಲಾಭ ಪಡೆದುಕೊಂಡಳೆಂದು ಕಾಣಿಸುತ್ತದೆ.

*ಅಬ್ರಹಾಮನ ಪ್ರತಿಕ್ರಿಯೆ: ಕಡುಸಂಕಟ ಮತ್ತು ವೇದನೆ* (21:11–14). ಅಬ್ರಹಾಮನ ಸಾರಳ ಬೇಡಿಕೆಗೆ ಹತಾಶೆಯ ಪ್ರತಿಕ್ರಿಯೆಯನ್ನು (21:11) ಮತ್ತು ವೇದನೆಯನ್ನು ವ್ಯಕ್ತಪಡಿಸಿದನು ಯಾಕೆಂದರೆ ಆತನು ತನ್ನ ಚೊಚ್ಚಲ ಮಗನಾದ ಇಸ್ಮಾಯೇಲನ ಮೇಲೆ ಪ್ರೀತಿಯಿಟ್ಟಿದ್ದನು. ಖಂಡಿತವಾಗಿಯೂ, ಈತನು ಇಬ್ಬರು ಸ್ತ್ರೀಯರ ನಡುವೆ ಇದ್ದ ಕ್ಷೋಬೆಯಲ್ಲಿರುವ ಕದನವಿರಾಮದ ಬಗ್ಗೆ ತಿಳಿದವನಾಗಿದ್ದನು. ಹೇಗೂ, ಈ ವೈರತ್ವವಿರುವ ಸ್ತ್ರೀಯರನ್ನು ಮತ್ತು ಅವರ ಪುತ್ರರನ್ನು ಒಟ್ಟಿಗೆ ಜೀವಿಸುವಂತೆ ತಾನು ಒತ್ತಾಯಿಸಿದರೆ ತನ್ನ ದಾಂಪತ್ಯದಲ್ಲಾಗಲಿ ಅಥವಾ ಮನೆಯಲ್ಲಾಗಲಿ ಎಂದಿಗೂ ಶಾಂತಿಯು ಇರಲಾರದು ಎಂಬುದನ್ನು ಈಗ ಆತನು ಗ್ರಹಿಸಿಕೊಂಡಿದ್ದನು. ದೇವರು ಇದನ್ನು ಮೂಲಪಿತೃವಿಗೆ ದೃಢಪಡಿಸುತ್ತಾ ಹೀಗೆ ಹೇಳಿದನು, "ಮಗನ ಮತ್ತು ದಾಸಿಯ ದೆಸೆಯಿಂದ ನಿನಗೆ ಕರಕರೆಯಾಗಬಾರದು; ಸಾರಳು ಹೇಳಿದಂತೆಯೇ ಮಾಡು; ಇಸಾಕನಿಂದ ಹುಟ್ಟುವವರೇ ನಿನ್ನ ಸಂತತಿ ಅನ್ನಿಸಿಕೊಳ್ಳುವರು" (21:12). ಬಳಿಕ ಯೆಹೋವನು ತಾನು ಇಸ್ಮಾಯೇಲನನ್ನು ಆಶೀರ್ವದಿಸಿ "ನಿನ್ನಿಂದ ಹುಟ್ಟಿದವನಾದ್ದರಿಂದ ಅವನಿಂದಲೂ ಜನಾಂಗವಾಗುವಂತೆ ಮಾಡುವೆನು" ಎಂದು ಅಬ್ರಹಾಮನಿಗೆ ಭರವಸ ನೀಡಿದನು (21:13).

ಈ ದೈವಿಕ ಆದೇಶ ಮತ್ತು ವಾಗ್ದಾನದ ಸನ್ನಿವೇಶವು ಅದಾದ ನಂತರದಲ್ಲಿ ಅಬ್ರಹಾಮನು ಮಾಡಿದ ಕ್ರಿಯೆಗಳನ್ನು ಅರ್ಥಮಾಡಿಕೊಳ್ಳುವಂತೆ ನಮಗೆ ಸಹಾಯ ಮಾಡುತ್ತದೆ. ಆತನು ಒಂದು ದಿನಕ್ಕೂ ಸಾಕಾದಷ್ಟು ರೊಟ್ಟಿ ಮತ್ತು ನೀರನ್ನು ಕೊಟ್ಟು ಹಾಗರಳು ಹಾಗೂ ಇಸ್ಮಾಯೇಲರನ್ನು ಕಾಡಿನೊಳಗೆ ಕಳುಹಿಸಿ ಬಿಟ್ಟಾಗ ಆತನು

ಮೂರ್ಖತನದಿಂದಾಗಲಿ ಅಥವಾ ಕಲ್ಲೆದೆಯವನಾಗಲಿ ಆಗಿರಲಿಲ್ಲ. ದೇವರು ತನ್ನ ವಾಗ್ದಾನಗಳಲ್ಲಿ ನಂಬಿಗಸ್ತನಾಗಿದ್ದಾನೆಂಬುದನ್ನು ಆತನು ಅನುಭವದಿಂದ ಕಲಿತುಕೊಂಡಿದ್ದನು. ಹಾಗರಳು ಮೊದಲ ಬಾರಿಗೆ ಕಾಡಿನೊಳಗೆ ಪಲಾಯನ ಮಾಡಿದ್ದ ವೇಳೆ, "ಯೆಹೋವನ ದೂತನು" ಆಕೆಗೆ ತನ್ನ ಯಜಮಾನಿಯ ಬಳಿಗೆ ಹಿಂದಿರುಗಿ ಹೋಗುವಂತೆ ಹೇಳಿದ್ದನ್ನು ನಿಶ್ಚಯವಾಗಿಯೂ ಈತನು ನೆನಪಿಟ್ಟುಕೊಂಡಿದ್ದನು. ಅಲ್ಲದೆ ದೂತನು ಆಕೆಗೆ ಒಬ್ಬ ಮಗನು ಹುಟ್ಟುವನು ಮತ್ತು ಅನೇಕ ಸಂತತಿಗಳು ಇರುವರೆಂದು ಸಹ ತಿಳಿಸಿದ್ದನು (16:7-14). ಅದರ ಜೊತೆಗೆ, ತಾನು ಇಸ್ಮಾಯೇಲನನ್ನು ಆಶೀರ್ವದಿಸುವೆನೆಂದು, ಅವನನ್ನು "ಹನ್ನೆರಡು ಮಂದಿ ಅರಸರನ್ನು ಪಡೆಯುವಂತೆ" ಮಾಡುವೆನು ಮತ್ತು ಆತನ ಸಂತತಿಯವರನ್ನು "ದೊಡ್ಡ ಜನಾಂಗವಾಗುವಂತೆ" ಮಾಡುವೆನೆಂದು ಯೆಹೋವನು ಅಬ್ರಹಾಮನಿಗೆ ವಾಗ್ದಾನ ಮಾಡಿದ್ದನು (17:20). ಈಗ ಯೆಹೋವನು ಪುನಃ ಮಾತಾಡಿದ್ದನು, ಇಸ್ಮಾಯೇಲನ ಭವಿಷ್ಯದ ಕುರಿತಾಗಿದ್ದ ವಾಗ್ದಾನಗಳನ್ನು ಪುನರುಚ್ಛರಿಸುತ್ತಾನೆ (21:13), ಅಬ್ರಹಾಮನು ತಡಮಾಡಲಿಲ್ಲ. ಯೆಹೋವನು ಆ ಕಾಡಿನಲ್ಲಿರುವ ಕೆಡುಕಿನ ವಾತಾವರಣದಲ್ಲಿ ಅವರನ್ನು ಕಾಪಾಡಿ ಅವರಿಗೆ ಒದಗಿಸುವನೆಂಬ ಭರವಸದಲ್ಲಿ ಅವರನ್ನು ಅತ್ಯಲ್ಪವಾದ ಅನ್ನಪಾನಗಳನ್ನು ನೀಡಿ ಕಳುಹಿಸಿ ಬಿಟ್ಟನು (21:14).

*ಹಾಗರಳ ಪ್ರತಿಕ್ರಿಯೆ: ಹತಾಶೆ, ಬಳಿಕ ಸಂತೋಷ* (21:15-19). ಹಾಗರಳು ಅಬ್ರಹಾನಷ್ಟು ದೃಢವಿಶ್ವಾಸದಿಂದ ಇರಲಿಲ್ಲ. ಬಹುಶಃ ಆಕೆಯು ಅನೇಕ ವರ್ಷಗಳ ಹಿಂದೆ ತನಗಾಗಿದ್ದ ಅನುಭವವನ್ನು ಮರೆತಿರುವಂತೆ ಕಾಣಿಸುತ್ತದೆ, ಆ ವೇಳೆಯಲ್ಲಿ ಅವಳು ಕಾಡಿನಲ್ಲಿ ನೀರಿನ ಬುಗ್ಗೆಯನ್ನು ಕಂಡುಕೊಂಡಿದ್ದಳು ಮತ್ತು ದೇವದೂತನು ಆಕೆಗೆ ಕಾಣಿಸಿಕೊಂಡು ಅವಳ ಮಗ ಮತ್ತು ಅವನ ಭವಿಷ್ಯದ ಸಂತತಿಯವರ ವಿಷಯದಲ್ಲಿ ವಾಗ್ದಾನಗಳನ್ನು ಮಾಡಿದ್ದನು (16:7-14). ಈ ಸಾರಿ, ನಡು ಮದ್ಯಾಹ್ನದ ಹೊತ್ತಿಗೆ, ಅವರಲ್ಲಿದ್ದ ನೀರು ತೀರಿ ಹೋದ ವೇಳೆ, ಹತಾಶೆಗೊಂಡಿದ್ದ ತಾಯಿಯು ತನ್ನ ಮಗನನ್ನು ಒಂದು ಪೊದೆಯ ಕೆಳಗೆ ಮಲಗಿಸಿ ತನ್ನ ಮಗನು ಸಾಯುವದನ್ನು ನನಗೆ ನೋಡಗೊಡಬೇಡ ಎಂಬುದಾಗಿ ದೇವರಿಗೆ ಮೊರೆಯಿಟ್ಟಳು (21:16). ಮತ್ತಾಂದಾವರ್ತಿ, ಆಕಾಶದಿಂದ ಒಬ್ಬ ದೇವದೂತನು ಮಾತಾಡಿದು. ಆತನು ಆ ಬಾಲಕನ ಅಳುವಿಕೆಯನ್ನು ಕೇಳಿಸಿಕೊಂಡಿದ್ದನು, ಮತ್ತು ಇಸ್ಮಾಯೇಲನ ಸಂತತಿಯವರನ್ನು ದೊಡ್ಡ ಜನಾಂಗವಾಗಿ ಮಾಡುವೆನೆಂಬ ವಾಗ್ದಾನವನ್ನು ಪುನಃ ದೃಢಪಡಿಸಿದನು (21:17, 18). ಅವರು ನೀರು ಕುಡಿದು ಚೇತರಿಸಿಕೊಳ್ಳುವಂತೆ ಆತನು ಹಾಗರಳಿಗೆ ಬಾವಿಯೊಂದನ್ನು ತೋರಿಸಿ ಕೊಟ್ಟನು.

ಇದು ಬೇರೆನೂ ಅಲ್ಲ ಆದರೆ ದೇವರು ತನ್ನ ವಾಗ್ದಾನಗಳಿಗೆ ನಂಬಿಗಸ್ತನು ಎಂಬುದಕ್ಕೆ ಮತ್ತೊಂದು ಉದಾಹರಣೆಯಷ್ಟೆ. ಜನರು ಆತನಲ್ಲಿ ಇನ್ನಷ್ಟು ಹೆಚ್ಚಾಗಿ *ಭರವಸ*ವಿಡುವವರಾಗುವಂತೆ ಅವರ *ನಂಬಿಕೆ*ಯನ್ನು ಆತನು ಹೆಚ್ಚಿಸಲು ಬಯಸಿದನು. ಅಬ್ರಹಾಮ ಮತ್ತು ಆತನ ಕುಟುಂಬದ ಮುಖಾಂತರವಾಗಿ, ದೇವರು ಅನೇಕ ಯುಗಗಳಿಂದಲೂ ತನ್ನ ಶ್ರೇಷ್ಠ ಯೋಜನೆಯನ್ನು ಕಾರ್ಯಸಾಧಿಸುತ್ತಿದ್ದನು; ಆದಾಗ್ಯೂ ಅದರಲ್ಲಿ ಭಾಗಿಯಾಗಿದ್ದವರು ಕೇವಲ ತನ್ನ ಸ್ವಂತ ಹಿತಾಸಕ್ತಿಗಳನ್ನಷ್ಟೇ ನೋಡಿಕೊಂಡರು. ಅನೇಕ ಸಾರಿ ನಾವು ನಮ್ಮನ್ನು ದಾಟಿ ಆಚೆಗೆ ನೋಡಲು ಮತ್ತು ದೇವರ ಅತ್ಯಮೋಘವಾದ ಯೋಜನೆಯನ್ನು ಕಾಣುವದಕ್ಕೆ ವಿಫಲರಾಗುತ್ತೇವೆ!

## ಅಡಿಟಿಪ್ಪಣಿಗಳು

[1]Gordon J. Wenham, *Genesis 16–50*, Word Biblical Commentary, vol. 2 (Dallas: Word Books, 1994), 80–81. [2]E. A. Speiser, *Genesis*, The Anchor Bible, vol. 1 (Garden City, N.Y.: Doubleday & Co., 1964), 155. See 1 Samuel 1:22-24, as well as 2 Maccabees 7:27. [3]ಇಸ್ಮಾಯೇಲನು ಹುಟ್ಟಿದ ವೇಳೆ ಅಬ್ರಹಾಮನು ಎಂಭತ್ತಾರು ವರ್ಷವದವನಾಗಿದ್ದನು (16:16) ಮತ್ತು ಇಸಾಕನು ಹುಟ್ಟಿದ ವೇಳೆ ನೂರು ವರ್ಷದವನಾಗಿದ್ದನು (17:17; 21:5), ಆ ವೇಳೆ ಇಸ್ಮಾಯೇಲನು ಅಂದಾಜು ಹದಿನಾಲ್ಕು ವರ್ಷದವನಾಗಿದ್ದನು (ನೋಡಿರಿ 17:24, 25). ಸುಮಾರು ಮೂರು ವರ್ಷಗಳ ಬಳಿಕ, ಇಸಾಕನು ಮೊಲೆಬಿಡುವ ವೇಳೆ, ಇಸ್ಮಾಯೇಲನು ಕನಿಷ್ಠ ಹದಿನಾರು ಅಥವಾ ಹದಿನೇಳು ವರ್ಷದವನಾಗಿದ್ದನು. [4]J. Barton Payne, “צָחַק,” in *TWOT*, 2:763. [5]Kenneth A. Mathews, *Genesis 11:27–50:26*, The New American Commentary, vol. 1B (Nashville: Broadman & Holman Publishers, 2005), 269. [6]Helmer Ringgren, “גָּרַשׁ,” in *Theological Dictionary of the Old Testament*, trans. John T. Willis and Geoffrey W. Bromiley, ed. G. Johannes Botterweck and Helmer Ringgren (Grand Rapids, Mich.: Wm. B. Eerdmans Publishing Co., 1978), 3:68–69. [7]ಒಂದು ಪೂರ್ಣವಾಗಿ ಬೆಳೆದ ಆಡಿನ ಚರ್ಮವು ಸುಮಾರು ಹನ್ನೊಂದು ಲೀಟರುಗಳಷ್ಟು ನೀರನ್ನು ಹಿಡಿಸುತ್ತಿತ್ತು ಮತ್ತು 3 ಕೀಲೊಗ್ರಾಮಿನಷ್ಟು ಭಾರವಿರುತ್ತಿತ್ತು. [8]ದಕ್ಷಿಣ ಇಸ್ರಾಯೇಲಿನಲ್ಲಿ ಮತ್ತು ಸೀನಾಯಿ ಪರ್ಯಾಯದ್ವೀಪದಲ್ಲಿರುವ ಕಾಡಿನೊಳಗೆ ನಡೆದು ಪ್ರಯಾಣಿಸುವವರಿಗೆ ಅನುಭವವುಳ್ಳ ಮಾರ್ಗದರ್ಶಿಗಳು ತಿಳಿಸುವದೇನೆಂದರೆ ಅವರು ಅಂಥ ಪ್ರತಿಕೂಲ ವಾತಾವರಣದಲ್ಲಿ ಬದುಕುಳಿಯಬೇಕಾದರೆ ಕನಿಷ್ಠ ಏಳು ಲೀಟರುಗಳಷ್ಟು ನೀರನ್ನಾದರೂ ಸೇವಿಸಬೇಕು ಎಂಬುದೆ. [9]Walter C. Kaiser, Jr., Peter H. Davids, F. F. Bruce, and Manfred T. Brauch, *Hard Sayings of the Bible* (Downers Grove, Ill.: InterVarsity Press, 1996), 123. [10]John T. Willis, *Genesis*, The Living Word Commentary (Austin, Tex.: Sweet Publishing Co., 1979), 284.

[11]Ibid., 285. [12]Wenham, 91. [13]Frederick W. Bush, “Hurrians,” in The International Standard Bible Encyclopedia, rev. ed., ed. Geoffrey W. Bromiley (Grand Rapids, Mich.: Wm. B. Eerdmans Publishing Co., 1982), 2:784–85. [14]Wenham, 91–92. [15]E. Kutsch, “כרת,” in *Theological Lexicon of the Old Testament*, trans. Mark E. Biddle, ed. Ernst Jenni and Claus Westermann (Peabody, Mass.: Hendrickson Publishers, 1997), 2:636. [16]Jack P. Lewis, “ בְּאֵר שֶׁבַע,” in *TWOT*, 1:87. The second explanation of the name “Beersheba” is found in Genesis 26:31–33. [17]Victor P. Hamilton, *The Book of Genesis: Chapters 18–50*, The New International Commentary on the Old Testament (Grand Rapids, Mich.: Wm. B. Eerdmans Publishing Co., 1995), 93. [18]K. A. Kitchen, *On the Reliability of the Old Testament* (Grand Rapids, Mich.: Wm. B. Eerdmans Publishing Co., 2003), 340–41. [19]Hamilton, 94. [20]Wenham, 94.

[21]ಅಬ್ರಹಾಮನು ಅನಂತರದಲ್ಲಿ, ಸಾರಳನ್ನು ಹೂಣಿಡುವದಕ್ಕೋಸ್ಕರ ಖರೀದಿಸಿದ ಮಕ್ಪೇಲದ ಗವಿಯು ಮೂಲಪಿತೃವಿಗೆ ಯೆಹೋವನು ಬಹುಮಾನವಾಗಿ ಕೊಟ್ಟಿದ್ದ ಒಂದು ಬಾಧ್ಯತೆಯ ಭಾಗವಾಗಿರಲಿಲ್ಲ (ನೋಡಿರಿ 23:1-20). [22]ಪೌಲನು ವಾಕ್ಯಭಾಗವನ್ನು ಇಸ್ಮಾಯೇಲನು ಇಸಾಕನನ್ನು “ಹಿಂಸಿಸಿದನು” (ಗಲಾತ್ಯ 4:29) ಎಂಬುದಾಗಿ ಅರ್ಥಮಾಡಿಕೊಂಡನು; ಆದರೆ ಅದು ಮಾನಸಿಕವೋ, ಶಾರೀರಿಕವೋ, ಅಥವಾ ಎರಡೂ ವಿಧವಾದ ಹಿಂಸೆಯೋ ಎಂಬುದನ್ನು ತಿಳಿಸಲಿಲ್ಲ.